ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಹರಪನಹಳ್ಳಿ ವಿಜಯನಗರ ಜಿಲ್ಲೆ

# ಪಾಠ ಯೋಜನೆ

## (ಕಲಿಕಾ ಫಲ ಆಧಾರಿತ)

### ಪ್ರಥಮ ಭಾಷೆ ಸಿರಿ ಕನ್ನಡ

### 8ನೇ ತರಗತಿ







ಬಸವರಾಜ ಟಿ.ಎಂ ಕನ್ನಡ ಭಾಷಾ ಶಿಕ್ಷಕರು

# ಪಾಠ ಯೋಜನೆ

## (ಕಲಿಕಾ ಫಲ ಆಧಾರಿತ)

### ಪ್ರಥಮ ಭಾಷೆ ಸಿರಿ ಕನ್ನಡ

### 8ನೇ ತರಗತಿ







# ಕಲಿಕಾ ಫಲ–1

**1. ವಿವಿಧ ಪ್ರಕಾರದ ಧ್ವನಿಗಳನ್ನು ಆಲಿಸಿದ ಅನುಭವಗಳನ್ನು (ಉದಾಹರಣೆಗೆ ಮಳೆ, ಗಾಳಿ, ರೈಲು, ಬಸ್ ಮುಂತಾದವು), ವಿವಿಧ ವಸ್ತುಗಳನ್ನು ಮುಟ್ಟಿದ ಇಲ್ಲವೆ ರುಚಿ ನೋಡಿದ ಅನುಭವಗಳನ್ನು ತಮ್ಮದೆ ರೀತಿಯಲ್ಲಿ ಬರವಣಿಗೆಯಲ್ಲಿ ಅಭಿವ್ಯಕ್ತಿಗೊಳಿಸುತ್ತಾರೆ.**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ಆಲಿಸಿದ ವಿಷಯಗಳನ್ನು ಮತ್ತು ತಮಗೆ ಆದ ಅನುಭವಗಳನ್ನು ತನ್ನದೇ ರೀತಿಯಲ್ಲಿ ಬರವಣಿಗೆಯ ಮೂಲಕ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಧ್ವನಿಗಳ ರೆಕಾರ್ಡ್ | | | | | |
| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ:** 1.ಕೇಳಿ–ಕೇಳಿಸಿ–ಹೇಳಿ | ಕೇಳಿದ ಧ್ವನಿ/ಶಬ್ದವನ್ನು ಅನುಕರಣೆ ಮಾಡುವುದು ಮತ್ತು ಅದರ ಬಗ್ಗೆ ಬರೆಯುವುದು | ಹಂತ–1 ಹಲವಾರು ಪ್ರಾಣಿ, ಪಕ್ಷಿ, ವಾಹನ ಮತ್ತು ಪ್ರಕೃತಿಯ ಕೆಲವು ವಸ್ತುಗಳ ಹೆಸರಿರುವ ಚೀಟಿಗಳನ್ನು ಬರೆದು ಒಂದು ಡಬ್ಬದಲ್ಲಿ ಹಾಕುವುದು, ಈ ರೀತಿ ಡಬ್ಬದಲ್ಲಿ ಹಾಕಿರುವ ಚೀಟಿಗಳನ್ನು ಆಯ್ದ ವಿದ್ಯಾರ್ಥಿಗಳಿಗೆ ನೀಡುತ್ತಾ, ಆ ಚೀಟಿಯಲ್ಲಿರುವ ವಾಹನ, ಪ್ರಾಣಿ ಅಥವಾ ಪಕ್ಷಿಯ ಸದ್ದನ್ನು ಅನುಕರಿಸುವಂತೆ ಸೂಚಿಸುವುದು. ಉಳಿದ ವಿದ್ಯಾರ್ಥಿಗಳು ಆ ಧ್ವನಿಯನ್ನು ಗುರುತಿಸಿ ಹೇಳುವರು. ನಂತರ ಧ್ವನಿಯನ್ನು ಅನುಕರಿಸಿದ ವಿದ್ಯಾರ್ಥಿ ತಾನು ಅನುಕರಿಸಿದ ಪ್ರಾಣಿ, ಪಕ್ಷಿ, ವಾಹನದ ಬಗ್ಗೆ ಒಂದೆರಡು ವಾಕ್ಯಗಳನ್ನು ಹೇಳುವುದು.<br>ಹಂತ–2 ವಿದ್ಯಾರ್ಥಿಗಳಿಗೆ 'ಅನುಕರಣಾವ್ಯಯ'ದ ಬಗ್ಗೆ ತಿಳಿಸಿಕೊಡುವುದು. ಅಭ್ಯಾಸ 1.1 ರಲ್ಲಿ ಬಂದಿರುವ ಸದ್ದುಗಳಿಗೂ ಅನುಕರಣಾವ್ಯಯದ ಪರಿಕಲ್ಪನೆಗೂ ಇರುವ ಸಂಬಂಧದ ಬಗ್ಗೆ ಗಮನ ಸೆಳೆಯುವುದು. | ಕಲಿಕಾ ಹಾಳೆ ಅಭ್ಯಾಸ 1.1, 1.2 | ಅವಲೋಕನ | |
| | **ಚಟುವಟಿಕೆ:** 2.ಸದ್ದು–ಗುದ್ದು. | ಅನುಕರಣಾವ್ಯಯ, ದ್ವಿರುಕ್ತಿ ಮತ್ತು ಜೋಡುನುಡಿಗಳನ್ನು ಗುರ್ತಿಸುವುದು ಮತ್ತು ಬಳಸುವುದು. | ಶಿಕ್ಷಕರು ವಿದ್ಯಾರ್ಥಿಗಳಿಗೆ ಅನುಕರಣಾವ್ಯಯ, ದ್ವಿರುಕ್ತಿ ಮತ್ತು ಜೋಡುನುಡಿಗಳಿಗೆ ಇರುವ ವ್ಯತ್ಯಾಸಗಳ ಬಗ್ಗೆ ತಿಳಿಸುವುದು. ಅನುಕರಣಾವ್ಯಯಗಳು, ದ್ವಿರುಕ್ತಿಗಳು ಮತ್ತು ಜೋಡುನುಡಿಗಳ ಪದಗಳನ್ನು ಮಿಶ್ರಣ ಮಾಡಿ ಕಪ್ಪುಹಲಗೆಯ ಮೇಲೆ ಬರೆಯುವುದು.. ಕಪ್ಪು ಹಲಗೆಯ ಮೇಲೆ ಬರೆದಿರುವ ಪದಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಒಂದು ಕಥೆ ಅಥವಾ ಸಂಭಾಷಣೆಯನ್ನು ಸೃಜಿಸುವಂತೆ ಉತ್ತೇಜಿಸುವುದು. | ಕಲಿಕಾ ಹಾಳೆ ಅಭ್ಯಾಸ 2.1, 2.2 | ಅವಲೋಕನ | |
| | **ಚಟುವಟಿಕೆ:** 3.ಕೇಳೋಣ, ಹೇಳೋಣ ಮತ್ತು ಬರೆಯೋಣ | ಕೇಳಿದ ಅಥವಾ ಆಲಿಸಿದ ಧ್ವನಿ ಅಥವಾ ಶಬ್ದವನ್ನು ತಮ್ಮ ಅನುಭವದಲ್ಲಿ ವ್ಯಕ್ತಪಡಿಸುವುದು. | 'ಯೂಟೂಬ್'ನಲ್ಲಿ ಸಿಗುವ ಅಥವಾ ಪ್ರಕೃತಿಯಲ್ಲಿ ಸಿಗುವ ಎಲ್ಲಾ ರೀತಿಯ ಧ್ವನಿ ಮತ್ತು ಶಬ್ದಗಳನ್ನು ಧ್ವನಿಮುದ್ರಿಕೆ(ರೆಕಾರ್ಡ್) ಮಾಡಿಕೊಂಡು ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಆಲಿಸುವ ವ್ಯವಸ್ಥೆಯನ್ನು ಮಾಡುವುದು. ವಿದ್ಯಾರ್ಥಿಗಳು ತಾವು ಆಲಿಸಿದ ಧ್ವನಿ ಅಥವಾ ಶಬ್ದವನ್ನು ಕುರಿತು ತಮ್ಮ ಅನುಭವಗಳನ್ನು ವ್ಯಕ್ತಪಡಿಸುವರು. | ಕಲಿಕಾಹಾಳೆ ಅಭ್ಯಾಸ 3.1 | ಅವಲೋಕನ | |
| | **ಚಟುವಟಿಕೆ:** 4.ಆಲಿಸು – ಬರೆ. | ತನ್ನ ಪರಿಸರದಲ್ಲಿ ಆಲಿಸಿದ ಅಥವಾ ಕೇಳಿಸಿಕೊಂಡ ಧ್ವನಿಯ ಅನುಭವವನ್ನು | ವಿದ್ಯಾರ್ಥಿಗಳನ್ನು ಸಂಖ್ಯೆಗೆ ಅನುಗುಣವಾಗಿ 4 ತಂಡಗಳಾಗಿ ಮಾಡುವುದು. ಪ್ರತಿ ತಂಡಕ್ಕೂ ಸಮಯವನ್ನು ನಿಗದಿ ಮಾಡಿ, ವಿದ್ಯಾರ್ಥಿಗಳು ತರಗತಿ ಕೊಠಡಿಯನ್ನು ಬಿಟ್ಟಾಗಿನಿಂದ ಪ್ರಾರಂಭಿಸಿ ಮುಂದಿನ ಹತ್ತು ನಿಮಿಷಗಳವರೆಗೆ ಶಾಲಾವರಣ, ಶಾಲಾ ಮುಂಭಾಗ ಹೀಗೆ ಬೇರೆ ಬೇರೆ ಸ್ಥಳಗಳಲ್ಲಿ ಸುತ್ತಾಡುತ್ತಾ ತಾವು ಆಲಿಸುವ ಪ್ರತಿ ಸದ್ದಿನ ಹೆಸರನ್ನು ಪಟ್ಟಿ | ಕಲಿಕಾಹಾಳೆ ಅಭ್ಯಾಸ 4.1 | ಅವಲೋಕನ | |

| | | | | | | |
|---|---|---|---|---|---|---|
| | | ಬರೆಹದ ರೂಪದಲ್ಲಿ ಅಭಿವ್ಯಕ್ತಿಸುವುದು. | ಮಾಡಿಕೊಳ್ಳುವಂತೆ ಸೂಚಿಸುವುದು. ಈ ರೀತಿ ಪಟ್ಟಿ ಮಾಡಿ ಬಂದ ನಂತರ ಯಾವ ತಂಡ ಹೆಚ್ಚು ಶಬ್ದ ಅಥವಾ ಧ್ವನಿಯನ್ನು ಪಟ್ಟಿಮಾಡಿದ್ದಾರೆ ಎಂಬುದನ್ನು ಗುರುತಿಸಿ ಪ್ರಶಂಸಿಸುವುದು. ನಂತರ ವಿದ್ಯಾರ್ಥಿಗಳು ಆಯಾಯ ತಂಡದಲ್ಲಿ ಕುಳಿತು ತಾವು ಪಟ್ಟಿ ಮಾಡಿದ ಧ್ವನಿ ಅಥವಾ ಶಬ್ದಗಳನ್ನು ಬಳಸಿ ಕಥೆ, ಕವನ ಅಥವಾ ಅನುಭವ ಬರೆಯಲು ಪ್ರೇರೇಪಿಸುವುದು. | | | |
| | **ಚಟುವಟಿಕೆ:** 5.ತಿನಿಸು ಮತ್ತು ರುಚಿ | ರುಚಿಯ ಅನುಭವವನ್ನು ಮೌಖಿಕವಾಗಿ ಮತ್ತು ಬರೆಹದ ರೂಪದಲ್ಲಿ ಅಭಿವ್ಯಕ್ತಿಸುವುದು. | ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಎರಡು ಗುಂಪುಗಳಾಗಿ ಮಾಡಿಕೊಳ್ಳುವುದು. ಮೊದಲು ಒಂದನೇ ಗುಂಪಿನವರು ತಿನಿಸಿನ ಹೆಸರು ಹೇಳುವರು. ಎರಡನೇ ಗುಂಪಿನವರು ಆ ತಿನಿಸಿನ ರುಚಿಯನ್ನು ಹೇಳುವರು. ನಂತರ ಎರಡನೇ ಗುಂಪಿನವರು ತಿನಿಸಿನ ಹೆಸರು ಹೇಳುವರು ಒಂದನೇ ಗುಂಪಿನವರು ಅದರ ರುಚಿಯನ್ನು ಹೇಳುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1,5.2 | ಅವಲೋಕನ | |
| | **ಚಟುವಟಿಕೆ:** 6.ಕಚಗುಳಿ; ಯಾವ ನೋವು ಹೇಗಿದೆ? | ವಿದ್ಯಾರ್ಥಿಗಳು ಮುಟ್ಟಿದ ಅಥವಾ ಸ್ಪರ್ಶ ಜ್ಞಾನದ ಬಗೆಗಿನ ತಮ್ಮ ಅನುಭವಗಳನ್ನು ತಮ್ಮದೇ ಆದ ಶೈಲಿಯಲ್ಲಿ ಬರೆಯುವುದು. | ತರಗತಿಯ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಾಲ್ಕು ಗುಂಪುಗಳನ್ನಾಗಿ ಮಾಡಿ, ಒಂದೊಂದು ಗುಂಪಿಗೂ ಒಂದೊಂದು ವಿಷಯವನ್ನು ನೀಡುವುದು.<br>1ನೇ ಗುಂಪು– ಸೂಜಿ ಚುಚ್ಚಿದ ಅನುಭವ<br>3ನೇ ಗುಂಪು– ತಣ್ಣೀರಿನಲ್ಲಿ ಸ್ನಾನ ಮಾಡಿದ ಅನುಭವ<br>2ನೇ ಗುಂಪು– ಸೊಳ್ಳೆ ಕಚ್ಚಿದ ಅನುಭವ<br>4ನೇ ಗುಂಪು– ಗಾಯದ ನೋವಿನ ಅನುಭವ<br>ಹೀಗೆ ವಿಷಯ ಹಂಚಿಕೆಯಾದ ನಂತರ ವಿದ್ಯಾರ್ಥಿಗಳು ತಮ್ಮ ಗುಂಪುಗಳಲ್ಲಿ ಕುಳಿತುಕೊಂಡು, ನೀಡಲ್ಪಟ್ಟ ವಿಷಯದ ಮೇಲೆ ಪರಸ್ಪರ ತಮ್ಮ ಅನುಭವಗಳನ್ನು ಚರ್ಚಿಸಿ ಅದನ್ನು ಟಿಪ್ಪಣಿ ರೂಪದಲ್ಲಿ ಬರೆದುಕೊಂಡು ಮಂಡಿಸುವರು. ಪ್ರತಿ ತಂಡದ ಮಂಡನೆಯ ನಂತರ ಅಗತ್ಯ ಪ್ರಶ್ನೆಗಳನ್ನು ಕೇಳುತ್ತಾ ಅವರನ್ನು ಪ್ರಶಂಸಿಸುವುದು. | ಅಭ್ಯಾಸ 6.1 ಮತ್ತು 6.2 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಮೌಲ್ಯಮಾಪನ ಚಟುವಟಿಕೆಯ ಭಾಗವಾಗಿ ಕಲಿಕಾ ಹಾಳೆಯ್ಲಲಿರುವ 1ನ್ನು ಬಳಸುವುದು. ಜೊತೆಗೆ ನಿಯೋಜಿತ ಕಾರ್ಯವನ್ನು ಮಾಡಿಸುವುದು.

**ನಿಯೋಜಿತ ಕಾರ್ಯಗಳು :** ಕಲಿಕಾ ಹಾಳೆಯ್ಲಲಿರುವ 1ನ್ನು ಬಳಸುವುದು. ಜೊತೆಗೆ ನಿಯೋಜಿತ ಕಾರ್ಯವನ್ನು ಮಾಡಿಸುವುದು.

ವಿಷಯ ಶಿಕ್ಷಕರ ಸಹಿ                                                ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–2

**2. ಕನ್ನಡ ಭಾಷೆಯ ವಿವಿಧ ಸಾಹಿತ್ಯ ಪ್ರಕಾರಗಳ ರಚನೆಗಳನ್ನು ಓದುತ್ತಾರೆ ಮತ್ತು ಕನ್ನಡ ಭಾಷಾ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಸೂಕ್ತ ಸ್ವರಭಾರ, ಗತಿಯನ್ನು ಅನುಸರಿಸಿ ಓದಿ ಅರ್ಥ ಮಾಡಿಕೊಂಡು, ಪ್ರಶಂಸಿಸುತ್ತಾರೆ. (ಇಲ್ಲಿ ಸಾಮ್ಯತೆಯ ಕಾರಣದಿಂದ ಎರಡೂ ಕಲಿಕಾ ಫಲಗಳನ್ನು ಒಟ್ಟಿಗೆ ಸೇರಿಸಿ ಪ್ರಕ್ರಿಯೆಯನ್ನು ಬರೆಯಲಾಗಿದೆ.)**

| | | | | | | |
|---|---|---|---|---|---|---|
| **8ನೇ ತರಗತಿ** | **ವಿಷಯ** | **ಪ್ರಥಮ ಭಾಷೆ ಕನ್ನಡ** | **ಪ್ರಾರಂಭ ದಿನಾಂಕ** | | **ಮುಕ್ತಾಯ ದಿನಾಂಕ** | |
| **ಉದ್ದೇಶಗಳು** | **ಸೂಕ್ತ ಧ್ವನಿ, ಸ್ವರ ಭಾರದೊಂದಿಗೆ ವಿಭಿನ್ನ ಕಥೆ, ನಾಟಕ ಮತ್ತು ಕವಿತೆಗಳನ್ನು ಓದಿ ಅರ್ಥ ಮಾಡಿಕೊಳ್ಳುವ ಮೂಲಕ ಅವುಗಳ ರಚನಾ ಶೈಲಿ, ಬಳಸಿರುವ ಭಾಷೆ, ಸೃಜನಶೀಲತೆ ಇತ್ಯಾದಿಗಳನ್ನು ಗುರುತಿಸುವ ಹಾಗೂ ಪ್ರಶಂಸಿಸುವ ಸಾಮರ್ಥ್ಯವನ್ನು ಬೆಳೆಸುವುದು.** | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, 8ನೇ ತರಗತಿ ಪಠ್ಯ ಪುಸ್ತಕ, ಕಥೆಗಳ ಪುಸ್ತಕ, ಚಿತ್ರಗಳು. | | | | | |

| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
|---|---|---|---|---|---|---|
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ:** 1.ಓದೋಣ – ಸಾಹಿತ್ಯ ಪ್ರಕಾರ ತಿಳಿಯೋಣ. | ವಿವಿಧ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸುವುದು. | ವಿವಿಧ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸುವಾಗ ಆಯ್ದ ಪಠ್ಯಗಳನ್ನು ಓದುತ್ತಾ, ಅವುಗಳ ಸ್ವರೂಪವನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವರು, ಚರ್ಚಿಸಿದ ವಿಷಯಗಳನ್ನು ಕ್ರೋಡೀಕರಿಸಿ ಕಪ್ಪು ಹಲಗೆಯ ಮೇಲೆ ಬರೆಯುವುದು. ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಕಪ್ಪುಹಲಗೆಯ ಮೇಲೆ ಬರೆದ ಮಾಹಿತಿಯನ್ನು ಕಲಿಕಾ ಹಾಳೆಯ ಅಭ್ಯಾಸ: 1.1ರಲ್ಲಿ ಬರೆದುಕೊಳ್ಳಲು ಸೂಚಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | **ಚಟುವಟಿಕೆ:** 2.ಧ್ವನಿಯ ಏರಿಳಿತ | ವಿವಿಧ ಸಾಹಿತ್ಯ ಪ್ರಕಾರಗಳನ್ನು ಸೂಕ್ತ ಸ್ವರ ಭಾರ, ಧ್ವನಿಯ ಏರಿಳಿತ ಮತ್ತು ಗತಿಯೊಂದಿಗೆ ಓದುವುದು. | ಉದಾಹರಣೆಗಾಗಿ ತೆಗೆದುಕೊಂಡಿರುವ ಸಾಹಿತ್ಯ ಪ್ರಕಾರಗಳನ್ನು ಸೂಕ್ತ ಸ್ವರ ಭಾರ, ಏರಿಳಿತಗಳೊಂದಿಗೆ ಗತಿಯನ್ನಾಧರಿಸಿ ಆಂಗಿಕ ಅಭಿನಯದೊಂದಿಗೆ ಮಾದರಿಯಾಗಿ ಓದುವುದು. ಓದುವ ರೀತಿಯನ್ನು ವಿದ್ಯಾರ್ಥಿಗಳು ಸೂಕ್ಷ್ಮವಾಗಿ ಆಲಿಸುವಂತೆ ಸೂಚಿಸುವುದು. ತದನಂತರ ವಿದ್ಯಾರ್ಥಿಗಳಿಂದ ಓದಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | **ಚಟುವಟಿಕೆ:** 3.ಅದಲು–ಬದಲು | ನೀಡಿರುವ ಸಾಹಿತ್ಯ ಪ್ರಕಾರವನ್ನು ಓದಿ, ಅದನ್ನು ಬೇರೆ ಸಾಹಿತ್ಯ ಪ್ರಕಾರಕ್ಕೆ ಪರಿವರ್ತಿಸುವುದು. | ಸಾಹಿತ್ಯ ಪ್ರಕಾರಗಳಲ್ಲೊಂದಾದ ಕಥೆಯನ್ನು ವಿದ್ಯಾರ್ಥಿಗಳಿಗೆ ನೀಡಿ, ಅದನ್ನು ಓದಿ ಅರ್ಥೈಸಿಕೊಂಡು ಪದ್ಯ, ಸಂಭಾಷಣೆ (ನಾಟಕ), ಕಿರು ಲೇಖನಗಳಾಗಿ ಪರಿವರ್ತಿಸಿ ರಚಿಸುವಂತೆ ಸೂಚಿಸುವುದು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಗುಂಪುಗಳಾಗಿ ಮಾಡಿಕೊಳ್ಳುವುದು. ನೀಡಿರುವ ಸಾಹಿತ್ಯವನ್ನು ಒಂದು ಗುಂಪು ಪದ್ಯ, ಇನ್ನೊಂದು ಗುಂಪು ಸಂಭಾಷಣೆ(ನಾಟಕ) ಮತ್ತೊಂದು ಗುಂಪು ಕಿರುಲೇಖನದ ರೂಪದಲ್ಲಿ ಪುನರ್ ರಚಿಸಲು ಸೂಚಿಸುವರು. ಪ್ರತಿ ಗುಂಪಿನವರು ನೀಡಿದ ಕಥೆಯನ್ನು ಓದಿ, ತಾವು ಆಯ್ದುಕೊಂಡ ಸಾಹಿತ್ಯ ಪ್ರಕಾರದಲ್ಲಿ ಸೃಜಿಸಲು ಚರ್ಚಿಸಲು ಅವಕಾಶ ನೀಡುವುದು. ನಂತರ ಆಯಾ ಗುಂಪಿನವರು ರಚಿಸಿದ ಪ್ರಕಾರವನ್ನು ತರಗತಿಯಲ್ಲಿ ಪ್ರಸ್ತುತ ಪಡಿಸಲು ಅನುಕೂಲಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.2,3.2 | ಅವಲೋಕನ | |
| | **ಚಟುವಟಿಕೆ:** 4.ನಾಟಕಾಭಿನಯ | ಚಿತ್ರಕ್ಕೊಂದು ಸಂಭಾಷಣೆಯನ್ನು ರಚಿಸಿ ಅಭಿನಯಿಸುವುದು | ವಿದ್ಯಾರ್ಥಿಗಳಿಗೆ ಚಿತ್ರ ಅಥವಾ ಸನ್ನಿವೇಶವನ್ನು ನೀಡಿ ವಿದ್ಯಾರ್ಥಿಗಳಿಂದ ನಾಟಕ ಅಥವಾ ಸಂಭಾಷಣೆಯನ್ನು ರಚಿಸುವಂತೆ ಪ್ರೇರೇಪಿಸುವುದು. ವಿದ್ಯಾರ್ಥಿಗಳು ರಚಿಸಿದ ಸಂಭಾಷಣೆ ಅಥವಾ ನಾಟಕವನ್ನು ಗುಂಪುಗಳಲ್ಲಿ ರಸಾನುಭಾವಗಳೊಂದಿಗೆ ಓದಿ ಅರ್ಥೈಸಿಕೊಳ್ಳುವರು. ವಿದ್ಯಾರ್ಥಿಗಳು ರಚಿಸಿದ ಸಾಹಿತ್ಯ ಪ್ರಕಾರಕ್ಕೆ ಆಂಗಿಕ ಅಭಿನಯದ ಮೂಲಕ ಅಭಿವ್ಯಕ್ತಿಸಲು ಅವಕಾಶವನ್ನು ನೀಡುವುದು. | ಕಲಿಕಾಹಾಳೆ ಅಭ್ಯಾಸ 4.1 | ಅವಲೋಕನ ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ನೀಡಿರುವ ಪದಗಳನ್ನು ಬಳಸಿಕೊಂಡು ಕಥೆ, ಗದ್ಯ, ಪದ್ಯ ಮತ್ತು ಸಂಭಾಷಣೆ ಅಥವಾ ಪ್ರಹಸನಗಳನ್ನು ರಚಿಸಿರಿ.

(ಕಾನನ, ಕೋಗಿಲೆ, ಮಾಮರ, ಮನುಜ, ಝೇಂಕಾರ, ಗಾನಲಹರಿ, ಭಾಸ್ಕರ, ಮಲ್ಲಿಗೆ, ಭ್ರಮರ, ಕಂಪು)

**ನಿಯೋಜಿತ ಕಾರ್ಯಗಳು :** 1. ಬೇರೆ ಬೇರೆ ಸಾಹಿತ್ಯ ಪ್ರಕಾರದ ಎರಡು ಪುಸ್ತಕಗಳನ್ನು ಸಂಗ್ರಹಿಸಿರಿ.

2. ಸಾಹಿತ್ಯ ಪ್ರಕಾರಗಳಲ್ಲೊಂದಾದ ಜಾನಪದ ಕಥೆಗಳನ್ನು ನಿಮ್ಮೂರಿನ ಹಿರಿಯರಿಂದ ಸಂಗ್ರಹಿಸಿ, ಜಾನಪದ ಕಥಾಪುಸ್ತಕ ಸಿದ್ಧಪಡಿಸಿ.

3. ನಿಮ್ಮ ಮನೆಯಲ್ಲಿರುವ ಹಿರಿಯರು ಹಾಡುವ ಹಾಡುಗಳನ್ನು ಬರೆದು ಸಂಗ್ರಹಿಸಿ, ಕೈ ಬರೆಹ ಪುಸ್ತಕ ರೂಪಕ್ಕೆ ತನ್ನಿರಿ.

ವಿಷಯ ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–3

**3. ಓದುವಾಗ ಮತ್ತು ಬರೆಯುವಾಗ ಸೂಕ್ತಲೇಖನ ಚಿಹ್ನೆಗಳನ್ನು ಅರ್ಥೈಸಿಕೊಂಡು ಬಳಸುತ್ತಾರೆ. ಬರೆಹದ ಉದ್ದೇಶಕ್ಕನುಸಾರ ಭಾವಪೂರ್ಣ ಅಭಿವ್ಯಕ್ತಿ ಶೈಲಿ ರೂಢಿಸಿಕೊಳ್ಳುತ್ತಾರೆ.**

| | | | | | | |
|---|---|---|---|---|---|---|
| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
| ಉದ್ದೇಶಗಳು | ಓದುವ ಮತ್ತು ಬರೆಯುವ ಕೌಶಲಗಳನ್ನು ಪರಿಣಾಮಕಾರಿಯಾಗಿ ಸಾಧಿಸಲು ಲೇಖನ ಚಿಹ್ನೆಗಳ ಜ್ಞಾನ ಮತ್ತು ಅವುಗಳ ಮಹತ್ತ್ವದ ಬಗ್ಗೆ ಅರಿವು ಮೂಡಿಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಲೇಖನ ಚಿಹ್ನೆಗಳ ಪಟ್ಟಿ, 8ನೇ ತರಗತಿ ಪಠ್ಯ ಪುಸ್ತಕ. | | | | | |
| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
| | | | | **ಸಾಧನಗಳು** | **ತಂತ್ರಗಳು** | |
| | ಚಟುವಟಿಕೆ: 1.ಏನು ವ್ಯತ್ಯಾಸ? | ಲೇಖನ ಚಿಹ್ನೆಗಳ ಪರಿಕಲ್ಪನೆ ಮತ್ತು ಮಹತ್ತ್ವವನ್ನು ತಿಳಿಯುವುದು. | ಲೇಖನ ಚಿಹ್ನೆರಹಿತವಾದ ಪರಿಚ್ಛೇದವನ್ನು ಕಪ್ಪು ಹಲಗೆಯ ಮೇಲೆ ಬರೆದು ಆಯ್ದ ವಿದ್ಯಾರ್ಥಿಗಳಿಂದ ಓದಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದು. ಸಂವಾದ ನಡೆಸಿದ ನಂತರ ಕಪ್ಪು ಹಲಗೆಯ ಮೇಲೆ ಬರೆದ ಪರಿಚ್ಛೇದವನ್ನು ಅಳಿಸದೆ ಹಾಗೆ ಉಳಿಸಿಕೊಂಡು, ಅದಕ್ಕೆ ಅಗತ್ಯ ಲೇಖನ ಚಿಹ್ನೆಗಳನ್ನು ಸೇರಿಸುವುದು. ಲೇಖನ ಚಿಹ್ನೆಗಳ ಅರ್ಥ ಮತ್ತು ಮಹತ್ತ್ವವನ್ನು ಹೇಳಿದ ನಂತರ ಕಲಿಕಾ ಹಾಳೆಯಲ್ಲಿರುವ ಅಭ್ಯಾಸ 1.1 ರಲ್ಲಿ ಎರಡನೇ ಪರಿಚ್ಛೇದವನ್ನು ನಕಲು ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | ಚಟುವಟಿಕೆ: 2.ನಾನು ಯಾರು ನೆನಪಿದೆಯಾ? | ಲೇಖನ ಚಿಹ್ನೆಗಳ ಪರಿಚಯ ಮತ್ತು ಅವುಗಳ ಬಳಕೆಯ ಜ್ಞಾನವನ್ನು ಪಡೆಯುವುದು | ಕಲಿಕಾ ಹಾಳೆಯಲ್ಲಿರುವಂತೆ ಚೌಕದಲ್ಲಿ ನೀಡಿರುವ ಸುಳಿವುಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಅವುಗಳಿಗೆ ಸೂಕ್ತವಾದ ಚಿಹ್ನೆಗಳನ್ನು ನೋಡಿ ಆಯ್ಕೆ ಮಾಡಿ 'ನಿಮ್ಮ ಉತ್ತರ' ಚೌಕದಲ್ಲಿ ಬರೆಯಲು ಹೇಳುವುದು.<br><br>**'ಚಿಹ್ನೆ ಹುಡುಕೊ ಚೆನ್ನ'** ಪದ್ಯವನ್ನು ಓದಿ ಅರ್ಥಮಾಡಿಕೊಂಡು ಅದರ ಆಧಾರದ ಮೇಲೆ ತಮ್ಮ ಉತ್ತರಗಳನ್ನು 'ಸರಿ ಉತ್ತರ' ಚೌಕದಲ್ಲಿ ಸರಿಪಡಿಸಲು ಅವಕಾಶ ನೀಡಿ, ಕೊನೆಗೆ ಸ್ವತಃ ಸರಿ ಉತ್ತರಗಳನ್ನು ಬರೆಸುವುದು. ಎಲ್ಲ ಲೇಖನ ಚಿಹ್ನೆಗಳನ್ನು ಅವುಗಳ ಸಂಕೇತ, ಹೆಸರು ಮತ್ತು ಬಳಕೆಯ ಸಂದರ್ಭದೊಂದಿಗೆ ವಿವರಿಸುವುದು. ನಂತರ ಕಲಿಕಾ ಹಾಳೆಯಲ್ಲಿರುವ ಪೂರಕ ವಿಷಯವನ್ನು ಓದಿ ಅರ್ಥಮಾಡಿಕೊಳ್ಳುವಂತೆ ಕಾಲಾವಕಾಶ ನೀಡುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 ಮತ್ತು 2.2,2.3 | ಅವಲೋಕನ | |
| | ಚಟುವಟಿಕೆ: 3.ಗುಂಪಿನಾಟ–ಚಿಹ್ನೆಪಾಠ | ಲೇಖನ ಚಿಹ್ನೆಗಳ ಬಳಕೆಯನ್ನು ಸೂಕ್ತ ಸಂದರ್ಭಗಳೊಂದಿಗೆ ಪ್ರಾಯೋಗಿಕವಾಗಿ ತಿಳಿಯುವುದು | ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳನ್ನು 5 ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೂ ಒಂದೊಂದು ಲೇಖನ ಚಿಹ್ನೆಯನ್ನು ಕೊಟ್ಟು ಕಲಿಕಾ ಹಾಳೆಯಲ್ಲಿ ಅವುಗಳ ಬಗ್ಗೆ ನಿಯೋಜಿಸಲಾಗಿರುವ ಅಭ್ಯಾಸವನ್ನು ಮಾಡಿಸುವುದು. ಸುಗಮಕಾರರು ಐದೂ ಗುಂಪುಗಳಿಗೂ ಕಲಿಕಾ ಹಾಳೆಯ ಅಭ್ಯಾಸ 3.1 ಕಾರ್ಯವನ್ನು ವಿವರಿಸಿ, ಅದನ್ನು ಪೂರ್ಣಗೊಳಿಸಲು ಸಹಾಯ ಮಾಡುವುದು. ವಿದ್ಯಾರ್ಥಿಗಳ ಗುಂಪಿಗೆ ನೀಡಿರುವ ಲೇಖನ ಚಿಹ್ನೆಗಳ ಬಳಕೆಯ ಸಂದರ್ಭವನ್ನು ಉದಾಹರಣೆ ಸಹಿತ ಪ್ರಸ್ತುತಪಡಿಸಲು ಅವಶ್ಯಕ ಸಲಹೆಯನ್ನು ನೀಡುವುದು. ಗುಂಪಿನಲ್ಲಿ ಪ್ರತಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೇರೇಪಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 | ಅವಲೋಕನ | |

| | | | | | | |
|---|---|---|---|---|---|---|
| | ಚಟುವಟಿಕೆ:<br>4.ಕಥೆ<br>ಓದೋಣ–<br>ಕತ್ತೆಯ ಜಾಣತನ | ನೀಡಿದ ಪಠ್ಯದಲ್ಲಿ ಲೇಖನ ಚಿಹ್ನೆಗಳನ್ನು ಗುರುತಿಸಿ, ಹೆಸರಿಸುವುದು. | ಕಲಿಕಾ ಹಾಳೆ ಅಭ್ಯಾಸ 4.1ರಲ್ಲಿ ನೀಡಿದ ಕಥೆಯನ್ನು ತರಗತಿಯಲ್ಲಿ ಭಾವಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಅದನ್ನು ಸೂಕ್ಷ್ಮವಾಗಿ ಗಮನಿಸಲು ಹೇಳುವುದು.<br>ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ಚರ್ಚಿಸುವರು.<br>* ಈ ಕಥೆಯಲ್ಲಿ ಬಳಸಿರುವ ಲೇಖನ ಚಿಹ್ನೆಗಳನ್ನು ಹೆಸರಿಸಿ.<br>* ಈ ಕಥೆಯಲ್ಲಿ ಯಾವ ಯಾವ ಚಿಹ್ನೆಗಳು ಎಷ್ಟು ಬಾರಿ ಬಂದಿವೆ? ತಿಳಿಸಿ | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |
| | ಚಟುವಟಿಕೆ:<br>5.ಭಾವ ತುಂಬಿ ಓದುವೆನು | ನೀಡಲ್ಪಟ್ಟ ಸಾಹಿತ್ಯವನ್ನು ಭಾವಪೂರ್ಣವಾಗಿ ಅಭಿವ್ಯಕ್ತಿಸುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಶಲ್ಯ ಯಾರ ಪರ? ಕಥೆಯನ್ನು ವಿದ್ಯಾರ್ಥಿಗಳ ಸಮ್ಮುಖದಲ್ಲಿ ಭಾವಪೂರ್ಣವಾಗಿ ಓದುವುದು. ನಂತರ ಹೀಗೆ ಲೇಖನ ಚಿಹ್ನೆಗಳು ಮತ್ತು ಅಲ್ಲಿರುವ ಭಾವಕ್ಕೆ ಅನುಗುಣವಾಗಿ ಓದಿದಾಗ ಅರ್ಥದ ಮೇಲೆ ಉಂಟಾಗುವ ಪರಿಣಾಮದತ್ತ ಗಮನ ಸೆಳೆದು ವಿದ್ಯಾರ್ಥಿಗಳಿಗೂ ಅದೇ ರೀತಿಯಲ್ಲಿ ಓದಲು ಉತ್ತೇಜಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** 1. ಖಂಡಿಕೆಯನ್ನು ಓದಿ ಸೂಕ್ತಲೇಖನ ಚಿಹ್ನೆಗಳನ್ನು ಆವರಣದಲ್ಲಿ ಬರೆಯಿರಿ

2. ಕೊಟ್ಟಿರುವ ಚಿತ್ರವನ್ನು ಗಮನಿಸಿ, ನಿಮಗನಿಸಿದ್ದನ್ನು ಸೂಕ್ತ ಲೇಖನ ಚಿಹ್ನೆಗಳೊಂದಿಗೆ ಬರೆಯಿರಿ

**ನಿಯೋಜಿತ ಕಾರ್ಯಗಳು :** 1. ಎಂಟನೆಯ ತರಗತಿಯ 'ಸಾರ್ಥಕ ಬದುಕಿನ ಸಾಧಕ' ಗದ್ಯವನ್ನು ಓದಿ ಅರ್ಥಮಾಡಿಕೊಂಡು ಅದನ್ನು ಸೂಕ್ತ ಲೇಖನ ಚಿಹ್ನೆಗಳೊಂದಿಗೆ ಸಂಭಾಷಣೆ ಅಥವಾ ಕಥೆಯನ್ನಾಗಿ ಬರೆಯಿರಿ.

2. 'ಇದೆಂಥ ಹುಚ್ಚು ಮಾರಾಯ ನಿನ್ನದು?!' ಇಲ್ಲಿ ಎರಡು ಚಿಹ್ನೆಗಳು ಒಂದರ ಪಕ್ಕದಲ್ಲಿ ಇನ್ನೊಂದು ಬಂದಿವೆ ಅಲ್ಲವೆ? ಇದರಂತೆ ಎರಡು ಚಿಹ್ನೆಗಳು ಒಟ್ಟಿಗೆ ಬಂದಿರುವ ಹತ್ತು ವಾಕ್ಯಗಳನ್ನು ಸುದ್ದಿ ಪತ್ರಿಕೆಗಳನ್ನು ಓದಿ ಸಂಗ್ರಹಿಸಿ, ತರಗತಿಯಲ್ಲಿ ಮಂಡಿಸಿ.

ವಿಷಯ ಶಿಕ್ಷಕರ ಸಹಿ                                                  ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–4

**4. ವಿವಿಧ ಸಂದರ್ಭಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ಬರೆಯುವ, ವಿವಿಧ ವಿಷಯ ಲೇಖನಗಳಲ್ಲಿ ಸೂಕ್ತವಾದ ಶಬ್ದಗಳನ್ನು, ನುಡಿಗಟ್ಟುಗಳನ್ನು, ವಾಕ್ಯರಚನೆಗಳನ್ನು ಪ್ರಯೋಗಿಸುತ್ತಾರೆ. ಮತ್ತು ವಿವಿಧ ಉದ್ದೇಶಗಳಿಗಾಗಿ ಬರೆಯುವ ವಿವಿಧ ವಿಷಯ ಲೇಖನಗಳಲ್ಲಿ ಲೇಖನ ಚಿಹ್ನೆಗಳನ್ನು ಸರಿಯಾಗಿ ಬಳಸುತ್ತಾರೆ. (ನುಡಿಗಟ್ಟುಗಳು, ನಾಣ್ಣುಡಿಗಳು, ಲೇಖನ ಚಿಹ್ನೆಗಳು ಮತ್ತು ಕಾಲ, ಲಿಂಗ, ಮೊದಲಾದ ವ್ಯಾಕರಣಾಂಶಗಳ ಪ್ರಯೋಗ ಮಾಡುತ್ತಾರೆ) (ಈ ಎರಡನ್ನೂ ಒಟ್ಟು ಮಾಡುವುದು)**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | **ವಿವಿಧ ಉದ್ದೇಶಗಳಿಗಾಗಿ ಲೇಖನಗಳನ್ನು, ಪ್ರಬಂಧ, ಪತ್ರಲೇಖನ ರಚಿಸುವಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಲೇಖನ ಚಿಹ್ನೆಗಳು, ನುಡಿಗಟ್ಟುಗಳು, ನಾಣ್ಣುಡಿಗಳು, ಕಾಲ. ಲಿಂಗ ಪರಿಕಲ್ಪನೆ, ಆಕರ್ಷಕ ಪದಗಳು ಮತ್ತು ವಾಕ್ಯಗಳನ್ನು, ಬಳಸಿ ಲೇಖನಗಳನ್ನು ರಚಿಸುವ ಸಾಮರ್ಥ್ಯವನ್ನು ಬೆಳೆಸುವುದು.** | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಲಿಂಗಗಳ ಮಿಂಚುಪಟ್ಟಿ 8ನೇ ತರಗತಿ ಪಠ್ಯ ಪುಸ್ತಕ. | | | | | |

| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
|---|---|---|---|---|---|---|
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ:** 1. ಹುಡುಕಾಡುವ ಕಥೆ | ನಾಣ್ಣುಡಿ, ನುಡಿಗಟ್ಟು ಹಾಗೂ ಗಾದೆ ಮಾತುಗಳ ಪರಿಕಲ್ಪನೆ ಮತ್ತು ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು | ವಿದ್ಯಾರ್ಥಿಗಳಿಗೆ ನೀಡಿರುವ ಅಪೂರ್ಣ ಕಥೆಯನ್ನು ಕಲಿಕಾ ಹಾಳೆಯಲ್ಲಿ ಗಮನಿಸುವಂತೆ ತಿಳಿಸಿ, ಸ್ವಾರಸ್ಯಕರವಾಗಿ ಕಥೆಯನ್ನು ಹೇಳುವುದು. ನಂತರ ಅದರಲ್ಲಿ ಅಡಿಗೆರೆ ಹಾಕಿರುವ ಪದಗಳನ್ನು ಗಮನಿಸಲು ಹೇಳಿ ಅವುಗಳ ವಿಶೇಷತೆಯನ್ನು ಚರ್ಚಿಸುವಂತೆ ಪ್ರೇರೇಪಿಸುವುದು. ಅದನ್ನು ಕಲಿಕಾ ಹಾಳೆಯಲ್ಲೂ ಬರೆಯುವಂತೆ ಸೂಚಿಸುವುದು. ನಂತರ ಸಂವಾದವನ್ನು ಮುಂದುವರೆಸುತ್ತಾ ನಾಣ್ಣುಡಿ, ನುಡಿಗಟ್ಟು, ಗಾದೆ– ಇವುಗಳ ಪರಿಕಲ್ಪನೆ ಮತ್ತು ಮಹತ್ತ್ವವನ್ನು ವಿವರಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ– 1.1,1.2,1.3 | ಅವಲೋಕನ | |
| | **ಚಟುವಟಿಕೆ:** 2. ಚಿತ್ರ ನೋಡು ನುಡಿಗಟ್ಟು ಹೇಳು. | ವಾಕ್ಯ ರಚನೆಯಲ್ಲಿ ನುಡಿಗಟ್ಟುಗಳನ್ನು ಬಳಸುವ ಸಾಮರ್ಥ್ಯ ಬೆಳೆಸುವುದು. | ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಗುಂಪುಗಳನ್ನು ಮಾಡುವುದು. ನಂತರ ಪ್ರತಿ ಗುಂಪಿಗೂ ನುಡಿಗಟ್ಟು ರಚಿಸಲು ಅನುವಾಗುವಂತೆ ಚಿತ್ರಗಳನ್ನು ನೀಡುವುದು. ವಿದ್ಯಾರ್ಥಿಗಳು ಚಿತ್ರಗಳನ್ನು ನೋಡಿ ಸೂಕ್ತ ನುಡಿಗಟ್ಟನ್ನು ರಚಿಸುವರು. ರಚಿಸಿದ ನುಡಿಗಟ್ಟುಗಳನ್ನು ವಿದ್ಯಾರ್ಥಿಗಳು ತರಗತಿಯಲ್ಲಿ ಮಂಡನೆ ಮಾಡಿ ಅರ್ಥವಿವರಣೆಯನ್ನು ನೀಡುವರು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | **ಚಟುವಟಿಕೆ:**3. ವೇದ ಸುಳ್ಳಾದರೂ – ಗಾದೆ ಸುಳ್ಳಾಗದು. | ವಾಕ್ಯ ರಚನೆಯಲ್ಲಿ ಗಾದೆ ಮಾತುಗಳನ್ನು ಬಳಸುವ ಸಾಮರ್ಥ್ಯ ಬೆಳೆಸುವುದು. | ವಿದ್ಯಾರ್ಥಿಗಳಿಗೆ ನಮ್ಮ ದೈನಂದಿನ ವ್ಯವಹಾರದಲ್ಲಿ ಮಾತಿನ ಮಧ್ಯೆ ನಾಣ್ಣುಡಿ (ಗಾದೆ) ಗಳನ್ನು ಸೇರಿಸಿ ಮಾತನಾಡುವುದನ್ನು ವಿವರಿಸುವುದು. ಗಾದೆಗಳ ಅರ್ಥವನ್ನು ವಿವರಿಸುವುದು. ನಾಣ್ಣುಡಿಗಳು ನಮ್ಮ ದೈನಂದಿನ ಜೀವನದಲ್ಲಿ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿವೆ ಎಂಬುದನ್ನು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ– 3.1 | ಅವಲೋಕನ | |
| | **ಚಟುವಟಿಕೆ:**4. ಕಥೆ ಓದಿ – ಗಾದೆ ತಿಳಿ. | ಕಥೆಯನ್ನು ಓದಿ ಗ್ರಹಿಸಿ, ಅದನ್ನು ಗಾದೆಯಾಗಿ ಪರಿವರ್ತಿಸುವ ಸಾಮರ್ಥ್ಯ ಬೆಳೆಸುವುದು | ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ತಂಡಗಳನ್ನು ಮಾಡಿಕೊಂಡು ಪ್ರತಿ ತಂಡಕ್ಕೂ ಕಥೆಯನ್ನು ನೀಡುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ಓದಿ, ಚರ್ಚಿಸಿ ಆ ಕಥೆಗೆ ಸೂಕ್ತವಾದ ಗಾದೆಯ ಮಾತನ್ನು (ನಾಣ್ಣುಡಿ) ಹೇಳುವಂತೆ ಮಾಡುವುದು. ಕಲಿಕಾ ಹಾಳೆಯಲ್ಲಿ ನೀಡಿರುವ ಮಾದರಿ ಕಥೆಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ:** 5. ಕಥೆ ಓದಿ – ನುಡಿಗಟ್ಟು ತಿಳಿ | ಲೇಖನಗಳಲ್ಲಿ ಬಳಕೆಯಾದ ನುಡಿಗಟ್ಟು ಮತ್ತು ಗಾದೆಗಳನ್ನು ಗುರ್ತಿಸುವುದು. | ಕಲಿಕಾ ಹಾಳೆಯಲ್ಲಿನ 5.1 ಕಥೆಯನ್ನು ವಿದ್ಯಾರ್ಥಿಗಳಿಂದ ಓದಿಸಿ, ಕಥೆಯಲ್ಲಿ ಬಳಸಿರುವ ನುಡಿಗಟ್ಟುಗಳನ್ನು ಗುರ್ತಿಸಿ, ಅವುಗಳ ಅರ್ಥವನ್ನು ತಿಳಿಸುವುದು. ನುಡಿಗಟ್ಟುಗಳು ರಚನೆಯಾಗುವ ಸಂದರ್ಭವನ್ನು ವಿವರಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | ಅವಲೋಕನ | |
| | **ಚಟುವಟಿಕೆ:** 6. ನಾನು ಯಾರು? (ನಾನೊಂದು ಲಿಂಗ, ನೀನೊಂದು ಲಿಂಗ) | ಲಿಂಗದ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡು ಅದನ್ನು ವಾಕ್ಯಗಳಲ್ಲಿ ಬಳಸುವುದು. | 3 ವಿದ್ಯಾರ್ಥಿಗಳನ್ನು ಕರೆದು ಅವರನ್ನು 3 ಕಡೆ ನಿಲ್ಲಿಸುವುದು. ನಂತರ ಒಂದನೇ ವಿದ್ಯಾರ್ಥಿಗೆ ಸ್ತ್ರೀ ಸೂಚಕ ಪದವನ್ನೂ, ಎರಡನೇ ವಿದ್ಯಾರ್ಥಿಗೆ ಪುರುಷ ಸೂಚಕ ಪದವನ್ನೂ, ಮೂರನೇ ವಿದ್ಯಾರ್ಥಿಗೆ ನಪುಂಸಕ ಸೂಚಕ ಪದವನ್ನೂ ಎಲ್ಲರಿಗೂ ಕಾಣುವಂತೆ ಸಾಕಷ್ಟು ದೊಡ್ಡ ಹಾಳೆಯಲ್ಲಿ ಮಿಂಚುಪಟ್ಟಿ ತಯಾರಿಸಿ ನೀಡುವುದು. ವಿದ್ಯಾರ್ಥಿಗಳು ಅದನ್ನು ಎಲ್ಲರಿಗೂ ಕಾಣಿಸುವಂತೆ ಹಿಡಿದು ನಿಲ್ಲುವರು. ವಿದ್ಯಾರ್ಥಿಗಳು ತಾವು ಯಾವ ಗುಂಪಿಗೆ ಸೇರಬೇಕೆಂದು ತಿಳಿಸುತ್ತ ಲಿಂಗದ ಪರಿಕಲ್ಪನೆ ನೀಡುವುದು. | ಕಲಿಕಾ ಹಾಳೆಯಲ್ಲಿ ರುವ ಅಭ್ಯಾಸ 6.1 | | |
| | **ಚಟುವಟಿಕೆ:** 7. ನೆನ್ನೆ–ಇಂದು–ನಾಳೆ/ಅಂದು–ಇಂದು–ಮುಂದು | ಕಾಲದ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡು ವಾಕ್ಯಗಳಲ್ಲಿ ಬಳಸುವುದು. | ಸಾಮಾನ್ಯ ಸಂವಾದ ನಡೆಸುತ್ತಾ, ಶಿಕ್ಷಕರ ಕೈಪಿಡಿಯಲ್ಲಿನ ಘಟನೆಯನ್ನು ಎಲ್ಲ ವಿದ್ಯಾರ್ಥಿಗಳಿಗೂ ಹೇಳುವುದು. ಅದರ ತುಣುಕುಗಳನ್ನು ಸರಿಪಡಿಸುವಂತೆ ಪ್ರೇರೇಪಿಸುತ್ತ ಕಲಿಕಾ ಹಾಳೆಗಳನ್ನಲಿನ ಚಟುವಟಿಕೆಗಳನ್ನು ಪೂರೈಸಿ ಕಾಲದ ಪರಿಕಲ್ಪನೆಯನ್ನು ಮೂಡಿಸುವುದು. | ಕಲಿಕಾ ಹಾಳೆಯಲ್ಲಿ ರುವ ಅಭ್ಯಾಸ 7.1 ಮತ್ತು 7.2 | | |

**ಮೌಲ್ಯಮಾಪನ ಚಟುವಟಿಕೆ :** ಗಾದೆ, ನುಡಿಗಟ್ಟು, ಲಿಂಗಗಳು ಇದಕ್ಕೆ ಸಂಬಂಧಿಸಿದ ಚಟುವಟಿಕೆಯನ್ನು ನೀಡುವುದು.

**ನಿಯೋಜಿತ ಕಾರ್ಯಗಳು :** 1. ನಿಮ್ಮ ಊರಿನ ಹಿರಿಯರನ್ನು ಕೇಳಿ ಹತ್ತು ಗಾದೆ ಮಾತುಗಳನ್ನು ಸಂಗ್ರಹಿಸಿ.

2. ಎಂಟನೇ ತರಗತಿಯ ಕನ್ನಡ ಪಠ್ಯದಲ್ಲಿ ಬಂದಿರುವ ಎಲ್ಲ ಗದ್ಯ ಮತ್ತು ಪದ್ಯಗಳನ್ನು ಓದಿ ಅಲ್ಲಿ ಬಂದಿರುವ ನುಡಿಗಟ್ಟುಗಳನ್ನು ಪಟ್ಟಿ ಮಾಡಿರಿ.

ವಿಷಯ ಶಿಕ್ಷಕರ ಸಹಿ | ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–5

**5. ಹೊಸ ಪದಪ್ರಯೋಗಗಳ ಬಗೆಗೆ ಜಿಜ್ಞಾಸೆ ಮಾಡುತ್ತಾರೆ ಮತ್ತು ಅವುಗಳ ಅರ್ಥ ಹುಡುಕುವುದಕ್ಕೆ ಶಬ್ದಕೋಶದ ಉಪಯೋಗ ಮಾಡುತ್ತಾರೆ. ಮತ್ತು ಶಬ್ದಕೋಶ, ವಾಚನಾಲಯ, ಅಂತರ್ಜಾಲ, ಮೊದಲಾದವುಗಳ ಸಹಾಯದಿಂದ ಸಾಹಿತ್ಯವನ್ನು ಅರ್ಥೈಸಿಕೊಳ್ಳುತ್ತಾರೆ. ಭಾಷೆಯ ಸೂಕ್ಷ್ಮತೆ, ಪದಪುಂಜ, ಪ್ರಾಸಪದಗಳನ್ನು ಪ್ರಶಂಸಿಸಿ ಬಳಕೆ ಮಾಡುತ್ತಾರೆ. (ಈ ಎರಡನ್ನೂ ಒಟ್ಟು ಮಾಡುವುದು)**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | **ಸಾಹಿತ್ಯದ ವಿವಿಧ ರಚನೆಗಳ ವಿಸ್ತೃತ ಓದಿಗಾಗಿ ಶಬ್ದಕೋಶ, ವಾಚನಾಲಯ, ಅಂತರ್ಜಾಲವನ್ನು ಬಳಸಿ ಸ್ವ–ಕಲಿಕೆಯತ್ತ ತನ್ನನ್ನು ತೊಡಗಿಸಿಕೊಳ್ಳುವುದು, ತನ್ನ ಅಭಿವ್ಯಕ್ತಿಯನ್ನು ಲಿಖಿತ ರೂಪದಲ್ಲಿ ದಾಖಲಿಸುವಂತೆ ಮಾಡುವುದು ಈ ಕಲಿಕಾ ಫಲದ ಮುಖ್ಯ ಉದ್ದೇಶವಾಗಿದೆ.** | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, 8ನೇ ತರಗತಿ ಪಠ್ಯ ಪುಸ್ತಕ, ಶಬ್ದಕೋಶ, ಗ್ರಂಥಾಲಯ. | | | | | |
| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ:** 1.ಅರ್ಥ ಹೇಳಿ ನೋಡೋಣ. | ಶಬ್ದಕೋಶದ ಬಳಕೆಯ ಮಹತ್ತ್ವವನ್ನು ಅರಿಯುವುದು. | ಕೆಲವು ಅಪರೂಪದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವುದು. ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದಿಸುತ್ತಾ ಆ ಪದಗಳ ಅರ್ಥವನ್ನು ಊಹೆ ಮಾಡಿ ಹೇಳುವಂತೆ ಪ್ರೇರೇಪಿಸುವರು. ವಿದ್ಯಾರ್ಥಿಗಳು ಊಹಿಸಿ ಹೇಳುವ ಅರ್ಥಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುತ್ತಾ ಎಲ್ಲಾ ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು. ಇದಾದ ನಂತರ ಶಿಕ್ಷಕರು ಆ ಪದಗಳನ್ನು ವಾಕ್ಯ ರೂಪದಲ್ಲಿ ಪ್ರಯೋಗಿಸುತ್ತಾ ಮತ್ತೆ ಕಪ್ಪು ಹಲಗೆಯ ಮೇಲೆ ಬರೆಯುವರು. ಚಟುವಟಿಕೆಯ ಅನುಭವದ ಸುತ್ತ ಸಂವಾದ ನಡೆಸುತ್ತಾ, ಶಬ್ದಕೋಶದ ಬಳಕೆಯ ಮಹತ್ತ್ವವನ್ನು ಮನವರಿಕೆ ಮಾಡಿಕೊಡುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | **ಚಟುವಟಿಕೆ:** 2.ಅರ್ಥಕ್ಕೂ ಪದಕ್ಕೂ ಎಲ್ಲಿಯ ನಂಟು | ಶಬ್ದಕೋಶದ ಬಳಕೆಯ ಜ್ಞಾನವನ್ನು ಹೆಚ್ಚಿಸುವುದು. | 8ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿರುವ "ತಲಕಾಡಿನ ವೈಭವ" ಎಂಬ ಗದ್ಯಭಾಗದಿಂದ ಆಯ್ದ ಪರಿಚ್ಛೇದವನ್ನು ಕಲಿಕಾ ಹಾಳೆಯಲ್ಲಿ ನೀಡಲಾಗಿದೆ. ಈ ಪರಿಚ್ಛೇದದಲ್ಲಿರುವ ಹೊಸ ಪದಗಳನ್ನು ವಿದ್ಯಾರ್ಥಿಗಳು ಪಟ್ಟಿ ಮಾಡುತ್ತಾ ಆ ಪದಗಳಿಗೆ ಅರ್ಥವನ್ನು ಹೇಳಿ, ವಾಕ್ಯ ರೂಪದಲ್ಲಿ ಪ್ರಯೋಗಿಸಿ ಬರೆಯುವರು. ನಂತರ ಶಬ್ದಕೋಶದಲ್ಲಿ ಪದಗಳಿಗೆ ಅರ್ಥ ಹುಡುಕುವ ವಿಧಾನಗಳನ್ನು ಪರಿಚಯಿಸುವುದು. (ಉದಾ: ಅಕಾರಾದಿಯಾಗಿ ಪದಗಳನ್ನು ಹುಡುಕುವುದು, ಪದಗಳನ್ನು ನಾಮಪದ, ಕ್ರಿಯಾಪದ ಇತ್ಯಾದಿಯಾಗಿ ಗುರುತಿಸಿಕೊಳ್ಳುವುದು ಇತ್ಯಾದಿ) | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 ಮತ್ತು 2.2,2.3,2.4 | ಅವಲೋಕನ | |
| | **ಚಟುಚಟಿಕೆ:** 3.ಪದ ಅರ್ಥ ಮತ್ತು ನಾನಾ ಅರ್ಥ | ಒಂದೇ ಪದವನ್ನು ಬೇರೆ ಬೇರೆ ಅರ್ಥದೊಂದಿಗೆ ವಾಕ್ಯದಲ್ಲಿ ಪ್ರಯೋಗಿಸುವುದು. | ಮಾದರಿಯಾಗಿ ತಿಳಿಸಿರುವಂತೆ ವಿದ್ಯಾರ್ಥಿಗಳಿಗೆ ನಾನಾರ್ಥ ಪದಗಳನ್ನು ಬಳಸಿ ಸ್ವಂತ ಅರ್ಥಪೂರ್ಣ ವಾಕ್ಯವನ್ನು ರಚಿಸಲು ತಿಳಿಸುವರು.<br>ಮಾದರಿ: ಕಾಡು:ಅರಣ್ಯ, ಪೀಡಿಸು.<br>1. ನಮ್ಮ ಊರಿನ ಪಕ್ಕದಲ್ಲಿ ದಟ್ಟವಾದ ಕಾಡೊಂದಿದೆ.<br>2. ಶಂಕ್ರಣ್ಣನು ಹಣಕ್ಕಾಗಿ ಕನಸಿನಲ್ಲಿಯೂ ಕಾಡುತ್ತಾನೆ.<br>ಸದರಿ ಚಟುವಟಿಕೆಯ ಭಾಗವಾಗಿ ಇಂತಹುದೇ ಇನ್ನಷ್ಟು ಚಟುವಟಿಕೆಗಳನ್ನು ಆಲೋಚಿಸಿ ಉತ್ತರ ಬರೆಯುವಂತೆ ಮಾಡುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 | ಅವಲೋಕನ | |

| | | | | | | |
|---|---|---|---|---|---|---|
| | **ಚಟುಚಟಿಕೆ:** 4.ಪದ ಬೇಟೆ | ಶಬ್ದಕೋಶದ ಬಳಕೆಯ ಅಭ್ಯಾಸವನ್ನು ಉತ್ತೇಜಿಸುವುದು ಮತ್ತು ಜಿಜ್ಞಾಸೆಯೊಂದಿಗೆ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸುವುದು | ಇಡೀ ತರಗತಿನ್ನು 4 ಗುಂಪುಗಳಾಗಿ ವಿಂಗಡಿಸುವುದು. ಪ್ರತೀ ಗುಂಪಿಗೂ, ತಲಾ 10 ಪದಗಳನ್ನು ಪ್ರತಿ ಗುಂಪಿಗೆ ನೀಡುವುದು. ವಿದ್ಯಾರ್ಥಿಗಳು ಆ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕಬೇಕು. ನಂತರ ಆ 10 ಪದಗಳನ್ನು ಬಳಸಿಕೊಂಡು ಗುಂಪಿನಲ್ಲಿ ಒಂದು ಪುಟ್ಟ ಲೇಖನ ಅಥವಾ ಕಥೆಯನ್ನು ರಚಿಸಿ ಪ್ರಸ್ತುತಪಡಿಸಲು ಅಗತ್ಯ ಮಾರ್ಗದರ್ಶನ ಮಾಡುವುದು. | ಕಲಿಕಾಹಾಳೆ ಅಭ್ಯಾಸ 4.1 | | |
| | **ಚಟುವಟಿಕೆ:** 5.ಪದ ಪ್ರಾಸ; ಪದ್ಯ ವಿಲಾಸ | ಪ್ರಾಸದ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡು, ಅವುಗಳನ್ನು ಮೆಚ್ಚಿ ಬಳಸುವುದು. | 8ನೇ ತರಗತಿಯ ಕನ್ನಡ ಪಠ್ಯಪುಸ್ತಕದ 'ಕನ್ನಡಿಗರ ತಾಯಿ' ಪದ್ಯವನ್ನು ಸೂಕ್ತ ಧ್ವನಿ ಏರಿಳಿತದೊಂದಿಗೆ ವಾಚಿಸಿ ವಿದ್ಯಾರ್ಥಿಗಳ ಗಮನವನ್ನು ಸೆಳೆಯುವುದು. ಆ ಪದ್ಯವನ್ನು ವಿದ್ಯಾರ್ಥಿಗಳಿಗೆ ಕೇಳಿಸುವರು. ನಂತರ ಪದ್ಯದ ಕುರಿತು ಸಂವಾದ ನಡೆಸುತ್ತಾ ಅದರಲ್ಲಿ ವಿಶೇಷವಾಗಿ ಬಳಕೆಯಾಗಿರುವ ಪದಗಳತ್ತ ಅವರ ಗಮನ ಸೆಳೆಯುವುದು. | ಕಲಿಕಾ ಹಾಳೆಯ ಅಭ್ಯಾಸ 5.1, 5.2 ಮತ್ತು 5.3 | ಅವಲೋಕನ | |
| | **ಚಟುವಟಿಕೆ:** 6.ಭಾಷಾ–ಭಂಡಾರ; ಖಜಾನೆಯ ತೆರೆಯೋಣ, ಮಸ್ತಕಕ್ಕೆ ಇಳಿಸೋಣ. | ಶಾಲೆಯಲ್ಲಿರುವ ಅಥವಾ ಊರಿನಲ್ಲಿರುವ ಗ್ರಂಥಾಲಯ ಅಥವಾ ವಾಚನಾಲಯಗಳಿಗೆ ಭೇಟಿ ನೀಡುವುದರ ಮೂಲಕ ಸಾಹಿತ್ಯಗಳನ್ನು ಓದಿ ಅರ್ಥೈಸಿಕೊಳ್ಳುವುದು. ಭಾಷಾ ಸೂಕ್ಷ್ಮತೆಯನ್ನು ಅರಿಯುವುದರ ಮೂಲಕ ತಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುವುದು. | ಶಾಲೆಯಲ್ಲಿರುವ ವಾಚನಾಲಯಕ್ಕೆ ವಿದ್ಯಾರ್ಥಿಗಳೊಂದಿಗೆ ಭೇಟಿ ನೀಡಿ, ಭಾಷಾ ಪಠ್ಯ ಬೋಧನೆಗೆ ಪೂರಕ ಮಾಹಿತಿ ಸಂಗ್ರಹಿಸಲು ತಿಳಿಸುವುದು. ಉದಾಹರಣೆಗೆ, ಸಾಹಿತ್ಯ ಪ್ರಕಾರಗಳಾದ ಕಥೆಗಳು, ಸಣ್ಣಕಥೆಗಳು, ಕವನಗಳು, ಲೇಖನಗಳು, ಗಾದೆಗಳು, ನಾಟಕಗಳು, ಒಗಟುಗಳು, ವ್ಯಕ್ತಿ ಪರಿಚಯಗಳು, ಕವಿ–ಕಾವ್ಯ ಪರಿಚಯಗಳು ಇತ್ಯಾದಿ (ಈ ಸಾಹಿತ್ಯ ಪ್ರಕಾರಗಳಲ್ಲಿ ಪಠ್ಯ ಬೋಧನೆಗೆ ಪೂರಕವಾದ ಅಂಶಗಳ ಮಾಹಿತಿ ಸಂಗ್ರಹ) ನಂತರ ಶಿಕ್ಷಕರು ತರಗತಿಯನ್ನು ನಾಲ್ಕು ಗುಂಪು ಮಾಡಿ ಆ ಗುಂಪುಗಳಿಗೆ 4 ಕಾರ್ಯಗಳನ್ನು ನೀಡುವುದು. ನಾಲ್ಕೂ ಗುಂಪುಗಳು ತಮ್ಮ ಶಾಲಾ ಗ್ರಂಥಾಲಯ ಅಥವಾ ಊರಿನ ಗ್ರಂಥಾಲಯಕ್ಕೆ ಭೇಟಿ ನೀಡಿ ತಮಗೆ ನೀಡಿದ ವಿಭಾಗದಿಂದ 10 ಮಾದರಿಗಳನ್ನು ಹುಡುಕಿ, ಓದಿ, ಪುಸ್ತಕಗಳ ಪಟ್ಟಿಯನ್ನು ಬರೆದು ತರಲು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 6.1 | ಅವಲೋಕನ | |
| | **ಚಟುವಟಿಕೆ:** 7.ಅಂತರ್ಜಾಲಕ್ಕೆ ನುಸುಳೋಣ, ಹೊಸ–ಹೊಸ ಮಾಹಿತಿ ತಿಳಿಯೋಣ | ಅಂತರ್ಜಾಲದ ಪರಿಚಯ, ಅದರ ಉಪಯೋಗ ಮತ್ತು ಸದ್ಬಳಕೆಯ ಬಗ್ಗೆ ತಿಳಿದುಕೊಳ್ಳುವುದು. | ಶೈಕ್ಷಣಿಕ ಬೆಳವಣಿಗೆಗೆ ಅಂತರ್ಜಾಲದ ಮಹತ್ತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು ಅಂತರ್ಜಾಲದ ಬಳಕೆಗೆ ಬಳಸುವ ಸಾಧನಗಳಾದ ಕಂಪ್ಯೂಟರ್, ಮೊಬೈಲ್, ಐಪ್ಯಾಡ್, ಟ್ಯಾಬ್ಲೆಟ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕ ಮಾಹಿತಿಗಳನ್ನು ಸಂಗ್ರಹಿಸುವ ವಿಧಾನದ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದು. ಶಾಲೆಯಲ್ಲಿ ಸ್ಮಾರ್ಟ್‌ಕ್ಲಾಸ್‌ನಲ್ಲಿ ಪ್ರಾತ್ಯಕ್ಷಿಕೆಯ ಮೂಲಕ ಅಂತರ್ಜಾಲದಲ್ಲಿ ಸುದ್ದಿಗಳನ್ನು ಹುಡುಕುವುದನ್ನು ಮತ್ತು ಓದಲು ಬಳಸುವುದನ್ನು ತಿಳಿಸಿಕೊಡುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 7.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಫಲ 5ನ್ನು ಆಧರಿಸಿ ಮೌಲ್ಯಮಾಪನ ಚಟುವಟಿಕೆಯನ್ನು ನೀಡುವುದು.

**ನಿಯೋಜಿತ ಕಾರ್ಯಗಳು :** 1. ನಿಮ್ಮ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿರುವ ಮೊದಲ ಐದು ಪಾಠಗಳನ್ನು ಓದಿ, ಅಲ್ಲಿರುವ ಹೊಸ ಪದಗಳಿಗೆ ನಿಮ್ಮದೇ ಆದ ಶಬ್ದಕೋಶವನ್ನು ರಚಿಸಿ.

2. ನಿಮ್ಮೂರಿನ ಗ್ರಂಥಾಲಯಕ್ಕೆ ಬೇಟಿ ನೀಡಿ ಅಲ್ಲಿ ಸಿಗುವ ಪುಸ್ತಕಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.

ವಿಷಯ ಶಿಕ್ಷಕರ ಸಹಿ                                                                                   ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–6

**6. ತಾವು ಕಂಡ ಚಿತ್ರಘಟನೆ ಸನ್ನಿವೇಶ, ಚಿತ್ರಸರಣಿ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ, ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುತ್ತಾರೆ.**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ವಿದ್ಯಾರ್ಥಿಗಳು ತಾವು ನೋಡಿ, ಕೇಳಿ, ಓದಿ ಗ್ರಹಿಸಿದ್ದನ್ನು ಅಥವಾ ಅದರ ಅನುಭವಗಳನ್ನು ಭಿನ್ನ ಪ್ರಕಾರಗಳಲ್ಲಿ ಸೃಜನಶೀಲವಾಗಿ ಮಾತು–ಬರೆಹ–ಆಂಗಿಕ ಅಭಿನಯದ ಮೂಲಕ ಅಭಿವ್ಯಕ್ತಿಸುವ ಸಾಮರ್ಥ್ಯಗಳನ್ನು ಬೆಳೆಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ವಸ್ತುಗಳ ಹೆಸರಿನ ಮಿಂಚು ಪಟ್ಟಿ, 8ನೇ ತರಗತಿ ಪಠ್ಯ ಪುಸ್ತಕ. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ ಸಾಧನಗಳು | ಮೌಲ್ಯಮಾಪನ ತಂತ್ರಗಳು | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | **ಚಟುವಟಿಕೆ:** 1.ಸಾಲಿಗೊಂದು ಸಾಲು | ನೋಡಿದ ದೃಶ್ಯವನ್ನು ಕುರಿತು ತಮ್ಮ ಆಲೋಚನೆ, ಕಲ್ಪನೆಯನ್ನು ಬಳಸಿ ಅನುಭವಗಳನ್ನು ಅಭಿವ್ಯಕ್ತಿಸುವುದು. | ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಕೆಳಗೆ ನೀಡಿದ ಚಿತ್ರವನ್ನು ತೋರಿಸುವುದು. ಆ ಚಿತ್ರವನ್ನು ಗಮನಿಸುವಂತೆ ತಿಳಿಸಿ, ಚಿತ್ರದ ಕುರಿತಂತೆ ಒಂದು ಸಾಲನ್ನು (ಉದಾ: ಅದೊಂದು ಸುಂದರವಾದ ಕಾಡು) ಹೇಳುವರು. ತದನಂತರ ಪ್ರತಿಯೊಬ್ಬ ವಿದ್ಯಾರ್ಥಿಯು ಆ ಸಾಲಿಗೆ ಹೊಂದುವ ತಮ್ಮದೇ ಆದ ಒಂದೊಂದು ಸಾಲನ್ನು ಹೇಳುತ್ತಾ ಆಶುಕಥೆಯನ್ನು ರಚಿಸುವಂತೆ ಸೂಚಿಸುವುದು. ಶಿಕ್ಷಕರು, ವಿದ್ಯಾರ್ಥಿಗಳು ಹೇಳಿದ ಸಾಲುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುತ್ತಾ ಕಥೆಯನ್ನು ಪೂರ್ಣಗೊಳಿಸುವುದು.  | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | **ಚಟುವಟಿಕೆ:** 2.ಜೋಡಿಸಿ–ಕಟ್ಟೋಣ. | ತಮ್ಮ ಆಲೋಚನಾ ಶಕ್ತಿ ಹಾಗೂ ಕಲ್ಪನಾಶಕ್ತಿಯನ್ನು ಬಳಸಿ ಘಟನೆಯನ್ನು ಅನುಕ್ರಮಗೊಳಿಸುವುದು. | ಘಟನೆಯನ್ನು ಹಿಂದುಮುಂದಾಗಿ ಕಪ್ಪು ಹಲಗೆಯ ಮೇಲೆ ಬರೆಯುವುದು. ವಿದ್ಯಾರ್ಥಿಗಳಿಗೆ ಆ ಘಟನೆಯನ್ನು ಗಮನಿಸಿ ಅನುಕ್ರಮವಾಗಿ ಜೋಡಿಸಿ ಅದಕ್ಕೊಂದು ಶೀರ್ಷಿಕೆಯನ್ನು ನೀಡಲು ತಿಳಿಸಿ, ವಿದ್ಯಾರ್ಥಿಗಳು ಹೇಳಿದ್ದನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು. ಮುಂದುವರೆದು ಅನುಕ್ರಮವಾಗಿ ಕಪ್ಪು ಹಲಗೆಯ ಮೇಲೆ ಬರೆದದ್ದನ್ನು ನೋಡಿಕೊಂಡು ಕಲಿಕಾ ಹಾಳೆಯಲ್ಲಿ ಬರೆದುಕೊಳ್ಳುವಂತೆ ತಿಳಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | **ಚಟುವಟಿಕೆ:** 3.ಚಿತ್ರ ಕಥಾಮಿತ್ರ | ಚಿತ್ರ ಸರಣಿ/ಚಿತ್ರ ಘಟನೆಯನ್ನು ಕುರಿತ ಅನುಭವಗಳನ್ನು ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಸರಣಿ ಚಿತ್ರಗಳನ್ನು ತೋರಿಸಿ ವಿದ್ಯಾರ್ಥಿಗಳಿಗೆ ಸ್ವಂತ ಕಥೆಯನ್ನು ರಚಿಸಲು ತಿಳಿಸುವುದು. ತದನಂತರ ವಿದ್ಯಾರ್ಥಿಗಳು ಬರೆದ ಕಥೆಯನ್ನು ತರಗತಿಯಲ್ಲಿ ವಾಚಿಸಲು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 | ಅವಲೋಕನ | |
| | **ಚಟುವಟಿಕೆ:** 4.ಹಾಸ್ಯ ಕಥೆ ಬರೆಯೋಣ | ಚಿತ್ರ ಸರಣಿಯನ್ನು ಗಮನಿಸಿ, ಅದರ ಅನುಭವವನ್ನು ಸೃಜನಶೀಲವಾಗಿ ಬರೆಯುವುದು. | ಶಿಕ್ಷಕರು ಕಲಿಕಾ ಹಾಳೆಯಲ್ಲಿರುವ ಹಾಸ್ಯ ಚಿತ್ರಗಳನ್ನು ತೋರಿಸಿ ವಿದ್ಯಾರ್ಥಿಗಳಿಗೆ ಸ್ವಂತ ಹಾಸ್ಯ ಕಥೆಯನ್ನು ರಚಿಸಲು ತಿಳಿಸುವರು. ತದನಂತರ ವಿದ್ಯಾರ್ಥಿಗಳು ಬರೆದ ಕಥೆಯನ್ನು ತರಗತಿಯಲ್ಲಿ ವಾಚಿಸಲು ತಿಳಿಸುವರು. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ:** 5.ಸಂಭಾಷಣೆ | ಇಬ್ಬರ ನಡುವೆ ನಡೆಯುವ ಸಂಭಾಷಣೆಯನ್ನು ಊಹೆ ಮಾಡಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಚಿತ್ರವನ್ನು ತೋರಿಸಿ ವಿದ್ಯಾರ್ಥಿಗಳಿಗೆ ಇಬ್ಬರ ನಡುವೆ ನಡೆಯುತ್ತಿರುವ ಸಂಭಾಷಣೆ ರಚಿಸಲು ತಿಳಿಸುವುದು. ತದನಂತರ ವಿದ್ಯಾರ್ಥಿಗಳು ಬರೆದ ಸಂಭಾಷಣೆಯನ್ನು ತರಗತಿಯಲ್ಲಿ ವಾಚಿಸಲು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | | |
| | **ಚಟುವಟಿಕೆ:** 6.ಘಟನೆಯನ್ನು ಊಹಿಸಿ | ಸರಣಿ ಚಿತ್ರಗಳನ್ನು ನೋಡಿ ನಡೆದಿರುವ ಘಟನೆಯನ್ನು ಊಹೆ ಮಾಡಿ ಕ್ರಿಯಾತ್ಮಕವಾಗಿ ಬರೆಯುವುದು. | ಕಲಿಕಾ ಹಾಳೆಯಲ್ಲಿರುವ ಚಿತ್ರಸರಣಿಯನ್ನು ತೋರಿಸಿ ವಿದ್ಯಾರ್ಥಿಗಳಿಗೆ ನಡೆದಿರಹುದಾದ ಘಟನೆಯನ್ನು ಊಹೆ ಮಾಡಿ ಬರೆಯುವುದಕ್ಕೆ ತಿಳಿಸುವುದು. ತದನಂತರ ವಿದ್ಯಾರ್ಥಿಗಳು ಬರೆದ ಘಟನೆಯನ್ನು ತರಗತಿಯಲ್ಲಿ ವಾಚಿಸಲು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 6.1 | ಅವಲೋಕನ | |
| | **ಚಟುವಟಿಕೆ:** 7.ಚಿತ್ರ ನೋಡಿ ಪದ್ಯ ಬರೆಯೋಣ | ಚಿತ್ರವನ್ನು ಗ್ರಹಿಸಿ ಪದ್ಯ ಬರೆಯುವುದು. | ಕಲಿಕಾ ಹಾಳೆಯಲ್ಲಿರುವ ಚಿತ್ರವನ್ನು ತೋರಿಸಿ ಪದ್ಯವನ್ನು ಬರೆಯುವುದಕ್ಕೆ ತಿಳಿಸುವುದು. ತದನಂತರ ವಿದ್ಯಾರ್ಥಿಗಳು ಬರೆದ ಪದ್ಯವನ್ನು ತರಗತಿಯಲ್ಲಿ ವಾಚಿಸಲು ತಿಳಿಸುವುದು. | ಕ. ಹಾ ಅಭ್ಯಾಸ 7.1 | | |
| | **ಚಟುವಟಿಕೆ:** 8.ಆಟದ ವಿಧಾನ ಬರೆಯೋಣ. | ಪರಿಚಿತ ಆಟವನ್ನು ಇತರರಿಗೆ ಪರಿಚಯಿಸುವಂತೆ ಕ್ರಿಯಾತ್ಮಕವಾಗಿ ನಿರೂಪಿಸುವುದು. | ಕಲಿಕಾ ಹಾಳೆಯಲ್ಲಿರುವ ಚಿತ್ರ ತೋರಿಸಿ ಆಟದ ವಿಧಾನವನ್ನು ಬರೆಯುವುದಕ್ಕೆ ತಿಳಿಸುವುದು. ಜೊತೆಗೆ ಅವರು ಬರೆಯುವ ಆಟದಲ್ಲಿ ಸ್ವತಃ ಅವರ ಅನುಭವಗಳನ್ನು ಸೇರಿಸುವುದಕ್ಕೆ ಅವಕಾಶವನ್ನು ಕಲ್ಪಿಸುವುದು. ತದನಂತರ ವಿದ್ಯಾರ್ಥಿಗಳು ಬರೆದ ಆಟದ ವಿಧಾನವನ್ನು ತರಗತಿಯಲ್ಲಿ ವಾಚಿಸಲು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 8.1 | | |
| | **ಚಟುವಟಿಕೆ:** 9.ಶೀರ್ಷಿಕೆ ಬರೆಯೋಣ | ಓದಿದ ಪಠ್ಯಕ್ಕೆ ಕ್ರಿಯಾತ್ಮಕವಾಗಿ ಶೀರ್ಷಿಕೆ ಯನ್ನು ನೀಡುವುದು. | ಕಲಿಕಾ ಹಾಳೆಯಲ್ಲಿರುವ ಕಥೆಯನ್ನು ಓದಿ ಕಥೆಗೆ ಸೂಕ್ತವಾದ ಶೀರ್ಷಿಕೆ ರಚಿಸಲು ತಿಳಿಸುವುದು. ತದನಂತರ ವಿದ್ಯಾರ್ಥಿಗಳು ಬರೆದ ಶೀರ್ಷಿಕೆಗಳನ್ನು ತರಗತಿಯಲ್ಲಿ ವಾಚಿಸಲು ತಿಳಿಸುವುದು. | ಕ. ಹಾ ಅಭ್ಯಾಸ 9.1 | | |
| | **ಚಟುವಟಿಕೆ:** 10.ಜಾಹೀರಾತು ರಚಿಸು. | ತಮ್ಮ ಆಲೋಚನೆ ಮತ್ತು ಕಲ್ಪನಾ ಶಕ್ತಿಯನ್ನು ಬಳಸಿ ಸೃಜನಾತ್ಮಕವಾಗಿ ಜಾಹೀರಾತುಗಳನ್ನು ರಚಿಸಿ ಅದನ್ನು ಆಂಗಿಕವಾಗಿ ಅಭಿವ್ಯಕ್ತಿಸುವುದು. | ತರಗತಿಯನ್ನು ಅಗತ್ಯಕ್ಕನುಗುಣವಾಗಿ ಗುಂಪು ಮಾಡಿಕೊಳ್ಳುವುದು. ವಸ್ತುಗಳ ಹೆಸರುಗಳಿರುವ ಮಿಂಚುಪಟ್ಟಿಗಳನ್ನು ಪ್ರತಿ ಗುಂಪಿಗೆ ನೀಡುವರು. ಮಕ್ಕಳು ಈ ವಸ್ತುಗಳಿಗೆ ಸಂಬಂಧಿಸಿದಂತೆ ಸ್ವತಃ ತಾವೇ ಹೊಸದಾಗಿ ಚಿಂತಿಸಿ ವಸ್ತುವಿನ ಹೆಸರು, ಪ್ರಚಾರ, ಪ್ರಚಾರದ ತಂತ್ರಗಳು ಇವೇ ಮೊದಲಾದ ವಿಷಯಗಳ ಮೇಲೆ ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿ ಬರೆದುಕೊಂಡು ಜಾಹೀರಾತನ್ನು ರಚಿಸಿ ಅಭಿನಯದ ಮೂಲಕ ವ್ಯಕ್ತಪಡಿಸುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 10.1 | | |

**ಮೌಲ್ಯಮಾಪನ ಚಟುವಟಿಕೆ :** 1. 'ನನ್ನ ಗೆಳೆಯರು' ಎಂಬ ವಿಷಯದ ಮೇಲೆ ಒಂದು ಕ್ರಿಯಾತ್ಮಕ ಸಂಭಾಷಣೆ ಬರೆಯಿರಿ.

2 'ಪಾನಿಪೂರಿ ಫಜೀತಿ' ಈ ಶೀರ್ಷಿಕೆಯನ್ನಿಟ್ಟುಕೊಂಡು ಒಂದು ಹಾಸ್ಯ ಕಥೆಯನ್ನು ಬರೆಯಿರಿ.

**ನಿಯೋಜಿತ ಕಾರ್ಯಗಳು :** 1. ದಿನಪತ್ರಿಕೆಗಳಲ್ಲಿ ಬರುವ ವ್ಯಂಗ್ಯ ಚಿತ್ರಗಳು ಮತ್ತು ಹಾಸ್ಯ ಕಥೆಗಳನ್ನು ಸಂಗ್ರಹಿಸಿ ಓದಿರಿ. 2. ಯಾವುದಾದರೂ ಮಕ್ಕಳ ನಿಯತಕಾಲಿಕೆಗೆ ನೀವೂ ಒಂದು ಪದ್ಯ ಅಥವಾ ಕಥೆ ಬರೆದು ಕಳುಹಿಸಿ. 3. ಪುಟ್ಟ ಗುಬ್ಬಚ್ಚಿಯ ಜೀವನ ಶೈಲಿಯನ್ನು ಆಧರಿಸಿ ಕಥೆ ರಚಿಸಿ

ವಿಷಯ ಶಿಕ್ಷಕರ ಸಹಿ                                        ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–7

**7. ತಾವು ಓದಿದ ಗದ್ಯ, ಪದ್ಯ, ಕತೆ, ಕಾವ್ಯಗಳನ್ನು ಕುರಿತು ಸತ್ಯಾಸತ್ಯತೆಯನ್ನು ಕುರಿತು ಮೌಲ್ಯಗಳ ಬಗೆಗೆ ತಮ್ಮ ನಿರ್ಧಾರವನ್ನು ಅಭಿವ್ಯಕ್ತಪಡಿಸುತ್ತಾರೆ. ಮತ್ತು ತಾನು ಓದಿದ ಅಥವಾ ತಿಳಿದ ವಿಷಯ ವಸ್ತುವಿನ ಬಗ್ಗೆ ವೈಚಾರಿಕವಾಗಿ ವಿಮರ್ಶಿಸುತ್ತಾ ಏಕೆ? ಏನು? ಹೇಗೆ? ಎಂಬುದನ್ನು ಅರಿಯಲು ಪ್ರಯತ್ನಿಸುತ್ತಾರೆ ಅಥವಾ ಸಮೂಹದಲ್ಲಿ ಚರ್ಚಿಸುತ್ತಾರೆ.**
**(ಈ ಎರಡನ್ನೂ ಒಟ್ಟು ಮಾಡುವುದು)**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ವಿದ್ಯಾರ್ಥಿಯು ತಾನು ಕಂಡ ಘಟನೆ ಅಥವಾ ಸನ್ನಿವೇಶಗಳನ್ನು ವಿವಿಧ ಆಯಾಮಗಳಲ್ಲಿ ಆಲೋಚಿಸಿ ತನ್ನ ಕಲಿಕೆಯ ಅನುಭವಗಳನ್ನು ಸಮ್ಮಿಳಿತಗೊಳಿಸಿ ಒಂದು ಉತ್ತಮ ತೀರ್ಮಾನ ಕೈಗೊಳ್ಳಲು, ವೈಚಾರಿಕ ನಿಲುವಿಗೆ ಬರಲು ಪ್ರಯತ್ನಿಸಬೇಕೆಂಬುದನ್ನು ಈ ಕಲಿಕಾ ಫಲವು ನಿರೀಕ್ಷಿಸುತ್ತದೆ. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಘೋಷಣಾ ವಾಕ್ಯಗಳ ಪಟ್ಟಿ, 8ನೇ ತರಗತಿ ಪಠ್ಯ ಪುಸ್ತಕ. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | ಚಟುವಟಿಕೆ: 1.ಪದ್ಯ ಭಂಡಾರ | ಕವಿತೆ ಅಥವಾ ಪಠ್ಯವನ್ನು ಓದಿ ಅರ್ಥಮಾಡಿಕೊಂಡು ವಿಶ್ಲೇಷಣೆ ಮಾಡುವುದು. | ವಿದ್ಯಾರ್ಥಿಗಳನ್ನು ಕಲಿಕಾ ಹಾಳೆಯಲ್ಲಿರುವ ಅಭ್ಯಾಸ 1.1 ಅನ್ನು ಓದಲು ಸೂಚಿಸುವುದು. ವಿದ್ಯಾರ್ಥಿಗಳು ಓದಿ, ಅದನ್ನು ತಮ್ಮ ಮಾತುಗಳಲ್ಲಿ ಪದ್ಯದ ಮುಖ್ಯ ವಿಚಾರಗಳನ್ನು ಮಾತನಾಡುವರು. ಮುಖ್ಯವಾಗಿ ಅದರಲ್ಲಿ ವ್ಯಕ್ತವಾಗಿರುವ ಆಶಯವನ್ನು ಕುರಿತು ಮಾತನಾಡುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | ಚಟುವಟಿಕೆ: 2.ಘಟನೆ ಓದು | ಓದಿದ ಮತ್ತು ತಿಳಿದ ವಸ್ತು ವಿಷಯಗಳನ್ನು ವೈಚಾರಿಕವಾಗಿ ವಿಮರ್ಶಿಸುವುದು. | ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿ ಕೊಟ್ಟಿರುವ ಘಟನೆಯನ್ನು ಓದಲು ಹೇಳುವುದು. ನಂತರ ಅಲ್ಲಿರುವ ಸನ್ನಿವೇಶದ ಕುರಿತು ಪ್ರಶ್ನೆಯನ್ನು ಕೇಳುತ್ತಾ ಘಟನೆಯಲ್ಲಿ ಬಂದಿರುವ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸುವುದು. ಈ ಚರ್ಚೆಯು ನೀಡಲಾದ ಪ್ರಶ್ನೆಗಳ ಸುತ್ತಾ ಇದ್ದು, ಆ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಪರಸ್ಪರ ಚರ್ಚಿಸಲು ಶಿಕ್ಷಕರು ಅಗತ್ಯ ಮಾರ್ಗದರ್ಶನ ನೀಡುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | ಚಟುವಟಿಕೆ: 3.ಕಥೆ ಕೇಳೋಣ | ಓದಿದ ಪಠ್ಯವನ್ನು ವಿಮರ್ಶೆ ಮಾಡುವುದು. | ರಾಮ ಮತ್ತು ನಾಯಿ ಕಥೆಯನ್ನು ವಿದ್ಯಾರ್ಥಿಗಳಿಗೆ ಸ್ವಾರಸ್ಯಕರವಾಗಿ ಹೇಳುತ್ತಾ, ಬೆಳವಣಿಗೆಯ ಪ್ರಶ್ನೆಗಳನ್ನು ಕೇಳುವುದು. ನಂತರ ವಿದ್ಯಾರ್ಥಿಗಳು ಮೌಖಿಕವಾಗಿ ಮತ್ತು ಲಿಖಿತವಾಗಿ ಕಥೆಗೆ ಸಂಬಂಧಿಸಿದಂತೆ ಪ್ರಶ್ನೆಗಳಿಗೆ ಉತ್ತರಿಸುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 | ಅವಲೋಕನ | |
| | ಚಟುವಟಿಕೆ: 4.ಆಲೋಚಿಸು | ಓದಿದ ವಿಷಯದ ಕುರಿತು ಏನು? ಏಕೆ? ಹೇಗೆ? ಎಂದು ತಾರ್ಕಿಕವಾಗಿ ಆಲೋಚಿಸಿ ಸಾಮೂಹಿಕವಾಗಿ ಚರ್ಚಿಸುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಕಥೆಯನ್ನು ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಓದಲು ಹೇಳುವುದು, ನಂತರ 4 ಗುಂಪುಗಳಾಗಿ ಮಾಡುವುದು. ಆ ಮೇರೆಗೆ 1ನೇ ತಂಡ ಈಗಾಗಲೇ ಇರುವ ಕಥೆಯ ಪ್ರಾರಂಭದ ಘಟನೆಯನ್ನು ಊಹಿಸಿ ಬರೆಯಬೇಕು, 2ನೇ ತಂಡ ಈ ಕಥೆಯ ಅಂತಿಮ ಭಾಗವನ್ನು ಮುಂದುವರಿಸಬೇಕು. 3ನೇ ತಂಡ ಈ ಕಥೆಗೆ ಕಡಿಮೆ ಸಾಲುಗಳಲ್ಲಿ ಸಾರಾಂಶವನ್ನು ಬರೆಯಬೇಕು. 4ನೇ ತಂಡವು ಕಥೆಗೆ ಕನಿಷ್ಠ 4 ಶೀರ್ಷಿಕೆಗಳನ್ನು ನೀಡಬೇಕು. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಬರುವ ಗೊಂದಲಗಳನ್ನು ನಿವಾರಿಸುತ್ತಾ ಚಟುವಟಿಕೆಯನ್ನು ಮಾಡಿಸುವುದು. | ಕಲಿಕಾಹಾಳೆ ಅಭ್ಯಾಸ 4.1 | ಅವಲೋಕನ | |

| | | | | | | |
|---|---|---|---|---|---|---|
| | ಚಟುವಟಿಕೆ:<br>5.ಸೂಕ್ತ ನಿರ್ಧಾರ ಮಾಡು | ಪಠ್ಯವನ್ನು ಓದಿ ಸೂಕ್ತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಕಥೆಯನ್ನು ವಿದ್ಯಾರ್ಥಿಗಳಿಗೆ ಸ್ವಾರಸ್ಯವಾಗಿ ಹೇಳುತ್ತಾ, ಕಥೆಯ ಬೆಳವಣಿಗೆಯ ಪ್ರಶ್ನೆಗಳನ್ನು ಕೇಳುವುದು. ನಂತರ ವಿದ್ಯಾರ್ಥಿಗಳು ಲಿಖಿತವಾಗಿ ಕಥೆಗೆ ಸಂಬಂಧಿಸಿದಂತೆ ಪ್ರಶ್ನೆಗಳಿಗೆ ಉತ್ತರಿಸುವರು. | ಕಲಿಕಾಹಾಳೆ ಅಭ್ಯಾಸ 5.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ **'ಕೊಳ್ಳುಬಾಕತನ'** ಪಠ್ಯವನ್ನು ಓದಿಕೊಂಡು ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿ.

**ನಿಯೋಜಿತ ಕಾರ್ಯಗಳು :** 1. ಗಾಂಧಿಜೀಯವರ ಆತ್ಮ ಚರಿತ್ರೆಯನ್ನು ಓದಿ ತಿಳಿಯಿರಿ.

2. ಸತ್ಯಹರಿಶ್ಚಂದ್ರ ಸಿನಿಮಾ ನೋಡಿ ಅಲ್ಲಿರುವ ಪಾತ್ರಗಳ ಬಗ್ಗೆ ಟಿಪ್ಪಣಿ ಬರೆದಕೊಂಡು ಬನ್ನಿ.

3. ವಿವಿಧ ವಚನಕಾರರ ವಚನಗಳನ್ನು ಸಂಗ್ರಹಿಸಿ ನಿಮಗೆ ಇಷ್ಟವಾದ ವಚನದ ಬಗ್ಗೆ ಸಾರಂಶವನ್ನು ಬರೆಯಿರಿ.

ವಿಷಯ ಶಿಕ್ಷಕರ ಸಹಿ                                                                                     ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–8

**8. ಸಂವೇದನಾತ್ಮಕ ಅಂಶಗಳಾದ ಜಾತಿ, ಧರ್ಮ, ಲಿಂಗ, ಆಚಾರ, ವಿಚಾರ ರೂಢಿ, ಸಂಪ್ರದಾಯ, ಉಡುಗೆ, ತೊಡುಗೆ ಮೊದಲಾದ ಅಂಶಗಳ ಬಗ್ಗೆ ಅನುಭವವನ್ನು ಮೌಖಿಕವಾಗಿ ಅಭಿವ್ಯಕ್ತಪಡಿಸುತ್ತಾರೆ. ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುತ್ತಾರೆ. ಉದಾ :– ತ್ಯಾಗ, ಬಲಿದಾನ, ಸ್ನೇಹ, ಇತ್ಯಾದಿ ಮೌಲ್ಯಗಳ ಬಗೆಗೆ ಮತ್ತು ಸಂವೇದನಾತ್ಮಕ ಅಂಶಗಳನ್ನು ಕುರಿತು ತಾರ್ಕಿಕ ಅಭಿಪ್ರಾಯವನ್ನು ಬರವಣಿಗೆಯ ಮೂಲಕ ಅಭಿವ್ಯಕ್ತ ಪಡಿಸುತ್ತಾರೆ ಹಾಗು ಭಿತ್ತಿಪತ್ರಿಕೆ/ ಪತ್ರಿಕಾ ತುಣುಕುಗಳನ್ನು ಸಂಗ್ರಹಿಸಿ ಅವುಗಳಿಗೆ ವಿಶ್ಲೇಷಣೆ ಬರೆದು ಸಂಪಾದಿಸುತ್ತಾರೆ. (ಈ ಎರಡನ್ನೂ ಒಟ್ಟು ಮಾಡುವುದು)**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ವಿವಿಧ ಜಾತಿ, ಸಂಪ್ರದಾಯ, ಆಚಾರ–ವಿಚಾರ ವಿವಿಧ ಉಡುಗೆ–ತೊಡುಗೆಗಳು ಮತ್ತು ವಿವಿಧ ರೂಢಿಗಳ ಬಗ್ಗೆ ಸಮನ್ವಯ ಭಾವ ಮತ್ತು ಸಮನ್ವಯ ಮೌಲ್ಯಗಳನ್ನು ಮತ್ತು ಭಾಷಿಕ ಆಯಾಮದಿಂದ ಅವುಗಳ ಬಗ್ಗೆ ಮುಕ್ತವಾಗಿ ಮಾತನಾಡುವಂತೆ, ವಿಮರ್ಶಾತ್ಮಕವಾಗಿ ಆಲೋಚಿಸುವಂತೆ, ಬರೆಯುವಂತೆ ಮಾಡುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, 8ನೇ ತರಗತಿ ಪಠ್ಯ ಪುಸ್ತಕ. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | ಚಟುವಟಿಕೆ: 1.ಇದು ಏಕೆ ಹೀಗೆ? | ಸಾಮಾಜಿಕ ತಾರತಮ್ಯದ ಕಡೆಗೆ ಗಮನ ಸೆಳೆಯುವುದು ಮತ್ತು ಅದರ ಕುರಿತು ಚಿಂತಿಸುವಂತೆ ಮಾಡುವುದು. | ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿನ ಮಾದರಿ ಚಿತ್ರಗಳನ್ನು ಪ್ರದರ್ಶಿಸುವುದು. ಆ ಚಿತ್ರಗಳು ಏನನ್ನು ಪ್ರತಿಬಿಂಬಿಸುತ್ತಿವೆ? ಅದು ಏಕೆ ಹೀಗೆ? ಇತ್ಯಾದಿಗಳನ್ನು ಕುರಿತು ಚರ್ಚಿಸುತ್ತಾ ಸಾಮಾಜಿಕ ತಾರತಮ್ಯದ ಕಡೆಗೆ ಗಮನ ಸೆಳೆಯುವುದರೊಂದಿಗೆ ಅಂತಹ ವಿಷಯಗಳನ್ನು ಕುರಿತು ತಾರ್ಕಿಕವಾಗಿ ಆಲೋಚಿಸುವಂತೆ ಪ್ರೇರೇಪಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | ಚಟುವಟಿಕೆ: 2.ನಾವೆಲ್ಲಾ ಒಂದೇ | ಸಾಮರಸ್ಯದ ಪರಿಕಲ್ಪನೆಯನ್ನು ಅರ್ಥೈಸುವುದು ಮತ್ತು ಸಮಾನತೆಯನ್ನು ಪ್ರತಿಪಾದಿಸುವುದು | ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿನ ಮಾದರಿ ಚಿತ್ರವನ್ನು ಪ್ರದರ್ಶಿಸಿ, ಗಮನಿಸಲು ತಿಳಿಸುವುದು. ತದನಂತರ ಆ ಚಿತ್ರವು ಸಾರುತ್ತಿರುವ ಸಂದೇಶದ ಕುರಿತಾಗಿ ಪ್ರಶ್ನೆಗಳ ಮೂಲಕ ಚರ್ಚಿಸುತ್ತಾ ಸಾಮರಸ್ಯವನ್ನು ಅರ್ಥೈಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | ಚಟುವಟಿಕೆ: 3.ನಮ್ಮ ಪ್ರಸ್ತಾವನೆ | ಸಂವಿಧಾನದ ಪ್ರಸ್ತಾವನೆಯಲ್ಲಿರುವ ಸಮಾನತೆ ಮತ್ತು ಸಮನ್ವಯತೆಯ ಅಂಶಗಳನ್ನು ಪರಿಚಯಿಸುವುದು. | ಭಾರತ ಸಂವಿಧಾನದ ಪ್ರಸ್ತಾವನೆಯನ್ನು ತರಗತಿಯಲ್ಲಿ ಓದುವುದು. ಹಾಗೂ ವಿದ್ಯಾರ್ಥಿಗಳಿಂದ ಓದಿಸುವುದು. ತದನಂತರ ಪ್ರಸ್ತಾವನೆಯಲ್ಲಿರುವ ಧಾರ್ಮಿಕ, ಸಾಮಾಜಿಕ, ಸ್ವಾತಂತ್ರ್ಯ, ಜಾತ್ಯಾತೀತತೆ, ಸಮತೆ ಇತ್ಯಾದಿ ಅಂಶಗಳನ್ನು ಉದಾಹರಣೆಯೊಂದಿಗೆ ಚರ್ಚಿಸುತ್ತಾ ಸಮಾನತೆಯ ಬಗ್ಗೆ ವಿವರಿಸುವುದು. ಚಟುವಟಿಕೆಯನ್ನು ಮುಂದುವರೆಸುತ್ತಾ ನೀಡಿರುವ ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳಿಂದ ಉತ್ತರವನ್ನು ಪಡೆದುಕೊಂಡು ಸಂವಾದವನ್ನು ಕ್ರೋಡೀಕರಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1,3.2 | ಅವಲೋಕನ | |
| | ಚಟುವಟಿಕೆ: 4.ಮಾತು–ಮಂಥನ | ವಿದ್ಯಾರ್ಥಿಗಳಿಗೆ ಲಿಂಗ ಸಂವೇದಿ ಅಂಶಗಳನ್ನು ಅರ್ಥೈಸುವುದು ಮತ್ತು ಲಿಂಗ ಸಾಮರಸ್ಯದ ಮೌಲ್ಯಗಳನ್ನು ಪ್ರತಿಪಾದಿಸುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಚಿತ್ರಗಳನ್ನು ವಿದ್ಯಾರ್ಥಿಗಳಿಗೆ ತೋರಿಸುತ್ತಾ ಲಿಂಗ ಸಂವೇದನೆಯ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. ಮುಕ್ತ ಚರ್ಚೆಯಲ್ಲಿ ಹೊರಬಂದ ಅಂಶಗಳನ್ನು ಆಧರಿಸಿ ಹೆಣ್ಣು ಮತ್ತು ಗಂಡು ಇಬ್ಬರೂ ಸಮಾನರು ಎಂಬ ಅಂಶಗಳನ್ನು ಸಾರಾಂಶೀಕರಿಸಿ ಲಿಂಗ ಸಮಾನತೆಯ ಪರಿಕಲ್ಪನೆ ಮತ್ತು ಅದರ ಮಹತ್ತ್ವವನ್ನು ಅರ್ಥಮಾಡಿಸುವುದು. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |

| | | | | | | |
|---|---|---|---|---|---|---|
| | ಚಟುವಟಿಕೆ: 5.ಮಾಹಿತಿಗೊಂದು ಮಿಂಚು | ಪ್ರಾದೇಶಿಕ ವೈವಿಧ್ಯತೆ ಮತ್ತು ವೈಶಿಷ್ಟತೆಯನ್ನು ಮೆಚ್ಚುವುದು ಮತ್ತು ಅದನ್ನು ಗೌರವಿಸುವುದು. | ತರಗತಿಯಲ್ಲಿರುವ ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಚಟುವಟಿಕೆಯನ್ನು ಹಂಚುವುದು (ಒಂದು ಮಾದರಿಯನ್ನು ಕಲಿಕಾ ಹಾಳೆಯಲ್ಲಿ ನೀಡಿದೆ) ಮೊದಲ ಗುಂಪಿನ ವಿದ್ಯಾರ್ಥಿಗಳು ತಮ್ಮ ಮಿಂಚು ಪಟ್ಟಿಯಲ್ಲಿರುವ ಪ್ರದೇಶಗಳ ಹೆಸರನ್ನು ಓದುವಂತೆ ತಿಳಿಸುವುದು. ಎರಡನೆಯ ಗುಂಪಿನ ವಿದ್ಯಾರ್ಥಿಗಳು ಆ ಪ್ರದೇಶಗಳಿಗೆ ಸರಿಹೊಂದುವ ಹಬ್ಬ ಆಚರಣೆಗಳನ್ನು ಹೊಂದಿಸಿ ಹೇಳುವಂತೆ ತಿಳಿಸುವುದು. ಮೂರನೆಯ ಗುಂಪಿನ ವಿದ್ಯಾರ್ಥಿಗಳು ಆಯಾ ಪ್ರದೇಶಗಳಿಗೆ ಸರಿಹೊಂದುವ ವಿಶೇಷ ಮಾಹಿತಿಯನ್ನು ಮಾದರಿಯಲ್ಲಿ ತಿಳಿಸಿರುವಂತೆ ಹೊಂದಿಸಿ ತರಗತಿಯಲ್ಲಿ ಓದಲು ಹೇಳುವುದು. ನಾಲ್ಕನೆಯ ಗುಂಪಿನ ವಿದ್ಯಾರ್ಥಿಗಳು ತಮಗೆ ನೀಡಿರುವ ಖಾಲಿ ಹಾಳೆಯಲ್ಲಿ ಮೊದಲ ಮೂರು ಗುಂಪುಗಳು ನೀಡಿದ ಮಾಹಿತಿಯನ್ನು ಸಾರಾಂಶೀಕರಿಸಿ, ಬರೆದು ತರಗತಿಯಲ್ಲಿ ಪ್ರಸ್ತುತಪಡಿಸುವಂತೆ ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | ಅವಲೋಕನ | |
| | ಚಟುವಟಿಕೆ–: 6.ಇವುಗಳನ್ನು ಪರಿಶೀಲಿಸಿ. | ಧಾರ್ಮಿಕ ತಾರತಮ್ಯ ಮತ್ತು ಸಾಮರಸ್ಯದ ಅಂಶಗಳನ್ನು ಕುರಿತು ವಿಮರ್ಶಾತ್ಮಕವಾಗಿ ಆಲೋಚಿಸಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು | 1. "ಕಾಯಕವೇ ಧರ್ಮ"<br>2. "ಮನುಷ್ಯ ಜಾತಿ ತಾನೊಂದೆ ವಲಂ."<br>3. "ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು."<br>ಈ ಮಾದರಿ ಹೇಳಿಕೆಗಳನ್ನು ತರಗತಿಯಲ್ಲಿ ಕಪ್ಪುಹಲಗೆಯ ಮೇಲೆ ಬರೆಯುವುದು ಮತ್ತು ಆ ಹೇಳಿಕೆಗಳನ್ನು ಓದಲು ವಿದ್ಯಾರ್ಥಿಗಳಿಗೆ ತಿಳಿಸಿ ನಂತರ ಅವುಗಳ ಕುರಿತಾಗಿ ಚರ್ಚಿಸುವುದು. ಚರ್ಚೆಯ ಸಂದರ್ಭದಲ್ಲಿ ಹೇಳಿಕೆಗಳನ್ನು ವಿದ್ಯಾರ್ಥಿಗಳೇ ಸ್ವತಃ ಸಮರ್ಥಿಸಲು ಪ್ರೇರೇಪಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 6.1, 6.2 | ಅವಲೋಕನ | |
| | ಚಟುವಟಿಕೆ: 7.ಸನ್ನಿವೇಶಕ್ಕೊಂದು ಸಂವೇದನೆ. | ಸಂವೇದನಾತ್ಮಕ ಅಂಶಗಳಾದ ಸ್ನೇಹ ತ್ಯಾಗ, ಬಲಿದಾನ, ಇತ್ಯಾದಿ ಮೌಲ್ಯಗಳನ್ನು ತಿಳಿದು, ಬದುಕಿನಲ್ಲಿ ಅಳವಡಿಸಿಕೊಳ್ಳುವುದು. | ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿ ನೀಡಿದ ಅಜ್ಜಿಯ ಕಥೆಯನ್ನು ನಿದರ್ಶನವಾಗಿ ಹೇಳುವುದು. ನಂತರ ನೀವು ಆ ಸಂದರ್ಭದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದಿರಿ? ಏಕೆ ಹೀಗೆ? ಎಂಬೆಲ್ಲಾ ಅಂಶಗಳ ಕುರಿತಾಗಿ ಸಂವಾದಿಸುತ್ತ ತ್ಯಾಗ–ಬಲಿದಾನ ಸ್ನೇಹ ಇತ್ಯಾದಿ ಮೌಲ್ಯಗಳು ಮತ್ತು ಸಂವೇದನಾತ್ಮಕ ಅಂಶಗಳ ಬಗ್ಗೆ ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 7.1 | ಅವಲೋಕನ | |
| | ಚಟುವಟಿಕೆ: 8.ಪತ್ರಿಕೆ ಸುದ್ದಿ ತಿಳಿಯೋಣ. | ಚಟುವಟಿಕೆ: 8 ಪತ್ರಿಕೆ ಸುದ್ದಿ ತಿಳಿಯೋಣ. | ವಿದ್ಯಾರ್ಥಿಗಳಿಗೆ ಸುದ್ದಿ ಪತ್ರಿಕೆಯನ್ನು ನೀಡುವುದು. ಪತ್ರಿಕೆಯಲ್ಲಿರುವ ಮುಖಪುಟ, ಸಂಪಾದಕೀಯ ಚಿಂತನೆ, ಪುರವಣಿಗಳು, ರಾಜಕೀಯ, ಸಾಹಿತ್ಯಿಕ, ಕ್ರೀಡೆ, ಜಾಹೀರಾತು ವಿಭಾಗ ಮುಂತಾದವುಗಳ ಕಡೆಗೆ ಗಮನ ಸೆಳೆಯುತ್ತಾ, ಚರ್ಚಿಸುತ್ತ ಸುದ್ದಿಪತ್ರಿಕೆಯ ಸ್ವರೂಪವನ್ನು ಪರಿಚಯಿಸುವುದು. ಮುಂದುವರೆದು ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ಮಾಡಿ ವರದಿಗಾರರು, ಛಾಯಾಗ್ರಾಹಕರು, ಸುದ್ದಿ ಸಂಪಾದಕರು, ಚಿಂತನಕಾರರು, ಜಾಹೀರಾತು ವಿಭಾಗ, ಸಾಹಿತಿಗಳು ಎಂಬಿತ್ಯಾದಿಯಾಗಿ ವಿದ್ಯಾರ್ಥಿಗಳನ್ನು ವಿಭಾಗಿಸಿ ಅವರಿಗೆ ಶಾಲೆಯಲ್ಲಿ ನಡೆದ ಒಂದು ದಿನದ ಕಾರ್ಯವನ್ನು ಕುರಿತಾಗಿ ಸುದ್ದಿ ಪತ್ರಿಕೆಯನ್ನು ತಯಾರಿಸಲು ತಿಳಿಸುವುದು. | ನಿಯೋಜಿತ ಕಾರ್ಯ ಹಾಳೆ | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ನನ್ನ ಅವಲೋಕನ ಹಾಳೆಯನ್ನು ಬಳಸಿ ಮೌಲ್ಯಮಾಪನ ಮಾಡುವುದು. ಅಥವಾ ಇದಕ್ಕೆ ಸೂಕ್ತ ಪ್ರಶ್ನೆ ರಚಿಸಿ ಮೌಲ್ಯಮಾಪನ ಮಾಡುವುದು.

**ನಿಯೋಜಿತ ಕಾರ್ಯಗಳು :** 1. ನಿಮ್ಮ ಶಾಲೆಯಲ್ಲಿ ನಡೆದ ____________________ ದಿನಾಚರಣೆಯ ಕುರಿತು ನಿಮ್ಮ ವಿಭಾಗದ ಮಾಹಿತಿಯನ್ನು ಕಲೆ ಹಾಕಿ ಸುದ್ದಿ ಪತ್ರಿಕೆಯನ್ನು ಹೊರ ತನ್ನಿರಿ.

2. ವಿವಿಧ ಧಾರ್ಮಿಕ ಮಹಾಪುರಷರ ಜೀವನ ಚರಿತ್ರೆಯನ್ನು ಓದಿ, ಧಾರ್ಮಿಕ ಸಾಮರಸ್ಯಕ್ಕೆ ಅವರು ನೀಡಿದ ಸಂದೇಶಗಳನ್ನು ಸಂಗ್ರಹಿಸಿ.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–9

**9. ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿ ನಿರ್ದೇಶನಗಳನ್ನು ಅರ್ಥಮಾಡಿಕೊಂಡು ಪಾಲಿಸುತ್ತಾರೆ. ಸಭೆ, ಸಮಾರಂಭ ಕಾರ್ಯಕ್ರಮಗಳನ್ನು ನಿರೂಪಿಸುತ್ತಾರೆ. ಮತ್ತು ಕೈಬರಹಗಳನ್ನು, ಮುದ್ರಿತ, ಪಠ್ಯೇತರ ವಿಷಯಗಳನ್ನು ಓದಿ ಅರ್ಥಮಾಡಿಕೊಳ್ಳುತ್ತಾರೆ. (ಸಮಾಚಾರ ಪತ್ರ, ದಿನಪತ್ರಿಕೆ, ತಿಳುವಳಿಕೆ, ಜಾಹಿರಾತು, ಇತ್ಯಾದಿ.**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ದಿನಪತ್ರಿಕೆಗಳು, ಜಾಹೀರಾತು, ಕೈಬರೆಹ ಅಥವಾ ಮುದ್ರಿತ ಸಾಮಗ್ರಿಗಳನ್ನು ಹಾಗೂ ಇತರೆ ಪಠ್ಯೇತರ ವಿಷಯಗಳನ್ನು ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಜಾಹೀರಾತುಗಳು, ಕೈಬರೆಹಗಳು, ದಿನಪತ್ರಿಕೆಗಳು, 8ನೇ ತರಗತಿ ಪಠ್ಯ ಪುಸ್ತಕ. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | ಚಟುವಟಿಕೆ:<br>1.ನನ್ನನ್ನು ನೋಡಿ; ಹೇಳಿದಂತೆ ಮಾಡಿ | ಸೂಚನೆಗಳ ಪರಿಕಲ್ಪನೆಯನ್ನು ಪುನಃಸ್ಮರಿಸುವುದು. | ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ, ಹೀಗೊಂದು ಆಟವಾಡೋಣ ಎಂದು ತಿಳಿಸುತ್ತಾ, ಅದರ ನಿಯಮಗಳನ್ನು ಮೌಖಿಕವಾಗಿ ಹೇಳದೇ ಕಪ್ಪು ಹಲಗೆಯ ಮೇಲೆ ಬರೆದು, ಅದನ್ನು ವಿದ್ಯಾರ್ಥಿಗಳು ಓದಿಕೊಂಡು ಅದರಂತೆ ಚಟುವಟಿಕೆಯಲ್ಲಿ ಭಾಗವಹಿಸುವಂತೆ ತಿಳಿಸುವುದು. "ನನ್ನನ್ನು ನೋಡಿ; ಹೇಳಿದಂತೆ ಮಾಡಿ" ಇದು ಆಟದ ಹೆಸರೂ ಹೌದು; ನಿಯಮವೂ ಹೌದು; ಸೂಚನೆಯೂ ಹೌದು. ಇಲ್ಲಿ ತಮ್ಮ ದೇಹದಿಂದ ಒಂದು ಭಂಗಿಯನ್ನು ತೋರಿಸತ್ತಾ ಬಾಯಿಯಿಂದ ಅದಕ್ಕೆ ವಿರುದ್ಧವಾದ ಪದವನ್ನು ಹೇಳುವರು. ಉದಾಹರಣೆಗೆ–ಬಾಯಿಂದ 5 ಎಂದು ಹೇಳುತ್ತಾ 2 ಬೆರಳು ತೋರಿಸುವುದು, ಕಣ್ಣು ಎಂದು ಹೇಳುತ್ತಾ ಮೂಗನ್ನು ತೋರಿಸುವುದು ಇತ್ಯಾದಿ. ಆಟದ ನಂತರ ಅದರ ಅನುಭವವನ್ನು ಕುರಿತು ವಿದ್ಯಾರ್ಥಿಗಳೊಂದಿಗೆ ಸಾಮಾನ್ಯ ಸಂಭಾಷಣೆಯನ್ನು ಮಾಡುವುದು. ಈ ಮೂಲಕ ಸೂಚನೆಗಳ ಮಹತ್ತ್ವವನ್ನು ಪರೋಕ್ಷವಾಗಿ ನಿರೂಪಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | ಚಟುವಟಿಕೆ:<br>2.ನಮ್ಮ ಸುತ್ತ | ನಿರ್ದೇಶನಗಳು ಮತ್ತು ಸೂಚನೆಗಳ ಪರಿಕಲ್ಪನೆ ಹಾಗೂ ವ್ಯತ್ಯಾಸಗಳನ್ನು ತಿಳಿಯುವುದು. | ಮೊದಲಿಗೆ ಸಾಮಾನ್ಯ ಮಾತುಕತೆ ನಡೆಸುವುದು. ಸಂವಾದಕ್ಕಾಗಿ ಪ್ರಶ್ನೆಗಳು: • ಶಾಲಾ ಅವಧಿ ಪ್ರಾರಂಭದಿಂದ ಮುಗಿಯುವ ತನಕ ನೀವು ನಮ್ಮಿಂದ ಕೇಳಿಸಿಕೊಳ್ಳುವ ಸಾಮಾನ್ಯ ಹೇಳಿಕೆಗಳು ಯಾವುವು? (ವಿದ್ಯಾರ್ಥಿಗಳ ಉತ್ತರ ಹೀಗಿರಬಹುದು– ಎಲ್ಲರೂ ಸಾಲಾಗಿ ಬನ್ನಿ, ದಿನಾಲೂ ಶುಭ್ರವಾದ ಬಟ್ಟೆಗಳನ್ನು ಹಾಕಿ ಶಾಲೆಗೆ ಬನ್ನಿ, ಪ್ರಾರ್ಥನಾ ಸಭೆಗೆ ಯಾರೂ ತಪ್ಪಿಸಿಕೊಳ್ಳಬಾರದು, ಊಟ ಹಾಕಿಸಿಕೊಳ್ಳುವಾಗ ಸರತಿಯನ್ನು ಅನುಸರಿಸಿ ಇತ್ಯಾದಿ) ಈ ಸಂವಾದವನ್ನು ಕ್ರೋಡೀಕರಿಸುತ್ತಾ ಶಿಕ್ಷಕರು ಸೂಚನೆಗಳು ಹಾಗೂ ನಿರ್ದೇಶನಗಳ ಪರಿಕಲ್ಪನೆಯನ್ನು ಮತ್ತು ಅವುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | ಚಟುವಟಿಕೆ:<br>3.ಎಲ್ಲರೊಂದಾಗಿ ಮಾಡೋಣ | ಗುಂಪು ಚಟುವಟಿಕೆಯಲ್ಲಿ ಭಾಗವಹಿಸಿ ನಿರ್ದೇಶನಗಳನ್ನು ಪಾಲಿಸುವುದು. | ತರಗತಿಯಲ್ಲಿರುವ ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ಮಾಡಿ, ಪ್ರತಿಯೊಂದು ತಂಡಕ್ಕೂ ಒಂದೊಂದು ಜವಾಬ್ದಾರಿಯನ್ನು ನೀಡುವುದು. ತಮ್ಮ ಗುಂಪಿಗೆ ನೀಡಲ್ಪಟ್ಟ ವಿಷಯ (ಕಾರ್ಯಕ್ರಮದ) ಆಯೋಜನೆಗೆ ಅನುಗುಣವಾಗಿ ನೀಡಬಹುದಾದ ನಿರ್ದೇಶನಗಳು ಮತ್ತು ಸೂಚನೆಗಳನ್ನು ಆಲೋಚಿಸಿ ಬರೆಯುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು. ತಂಡದ ಎಲ್ಲಾ ವಿದ್ಯಾರ್ಥಿಗಳ ಪರಿಣಾಮಕಾರಿ ಪಾಲ್ಗೊಳ್ಳುವಿಕೆಯನ್ನು ಮೇಲ್ವಿಚಾರಣೆ ಮಾಡುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1,3.2 | ಅವಲೋಕನ | |

| | | | | | | |
|---|---|---|---|---|---|---|
| | ಚಟುವಟಿಕೆ: 4.ಕಾರ್ಯಕ್ರಮ ಕ್ಕೊಂದು ನಿರೂಪಣೆ | ಕಾರ್ಯಕ್ರಮದ ನಿರೂಪಣಾ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವುದು ಮತ್ತು ನಿರೂಪಣಾ ಸಾಮರ್ಥ್ಯವನ್ನು ಹೊಂದುವುದು. | ತರಗತಿಯಲ್ಲಿ ಕಾರ್ಯಕ್ರಮವೊಂದರ ನಿರೂಪಣಾ ಮಾದರಿಯನ್ನು ಪ್ರದರ್ಶಿಸುವುದು. ನಂತರ ವಿದ್ಯಾರ್ಥಿಗಳಿಗೆ ತಾವು ನೋಡಿದ ಕಾರ್ಯಕ್ರಮದಲ್ಲಿನ ಅಂಶಗಳ ಕುರಿತು ಹೇಳುವಂತೆ ತಿಳಿಸುವುದು. ಮುಂದುವರೆದು, ತರಗತಿಯ ವಿದ್ಯಾರ್ಥಿಗಳನ್ನು ಎರಡು ಗುಂಪು ಮಾಡಿ ಒಂದು ಗುಂಪಿಗೆ ಕನ್ನಡ 'ಭಾಷಾ ಸಂಘದ ಉದ್ಘಾಟನೆ' ಹಾಗೂ ಮತ್ತೊಂದು ಗುಂಪಿಗೆ 'ಶಾಲಾ ವಾರ್ಷಿಕೋತ್ಸವ ಸಮಾರಂಭ'ದ ಅಣುಕು ನಿರೂಪಣೆ ಮಾಡಲು ತಿಳಿಸುವುದು. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2, 4.3 | ಅವಲೋಕನ | |
| | ಚಟುವಟಿಕೆ: 5.ಪತ್ರಿಕೆ ಓದೋಣ; ಮಾಹಿತಿ ತಿಳಿಯೋಣ | ದಿನಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳುವುದು. | ಕಲಿಕಾ ಹಾಳೆಯಲ್ಲಿರುವ "ನೂರು ಇಬ್ಬನಿಗಳು ಪುಸ್ತಕ ಲೋಕರ್ಪಣೆ" ಕಾರ್ಯಕ್ರಮದ ಪತ್ರಿಕಾ ವರದಿಯನ್ನು ವಿದ್ಯಾರ್ಥಿಗಳಿಗೆ ನೀಡಿ ಓದಲು ತಿಳಿಸಿ, ಚರ್ಚೆಯನ್ನು ಮಾಡುವುದು. | ಕಲಿಕಾಹಾಳೆ ಅಭ್ಯಾಸ 5.1 | | |
| | ಚಟುವಟಿಕೆ: 6.ಕೈ ಬರೆಹದ ಕರೆಯೋಲೆ | ಕೈ ಬರೆಹಗಳನ್ನು ಓದಿ ಅರ್ಥಮಾಡಿಕೊಳ್ಳುವುದು. | ಕಲಿಕಾ ಹಾಳೆಯಲ್ಲಿ ನೀಡಿರುವ ಕೈಬರೆಹದ ಆಹ್ವಾನ ಪತ್ರಿಕೆಯನ್ನು ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ತಮ್ಮ ಕಲಿಕಾ ಹಾಳೆಯಲ್ಲಿ ನೋಡಲು ತಿಳಿಸಿ, ತಾವು ಮಾದರಿ ವಾಚನವನ್ನು ಮಾಡುವುದು. ಮುಂದುವರೆದು ವಿದ್ಯಾರ್ಥಿಗಳಿಗೆ ಓದಲು ಹೇಳುವುದು. | ಕಲಿಕಾಹಾಳೆ ಅಭ್ಯಾಸ 6.1 | | |
| | ಚಟುವಟಿಕೆ: 7 ಇದು ಯಾರದ್ದು? ಅದು ಯಾರದ್ದು? | ಇತರರ ಕೈ ಬರೆಹಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು. | ಎಲ್ಲಾ ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕೂರಿಸಿ, ತಮ್ಮ ನೋಟ್ ಪುಸ್ತಕದಲ್ಲಿ ಅಥವಾ ತಾವೇ ನೀಡಿದ ಪ್ರತ್ಯೇಕ ಹಾಳೆಗಳಲ್ಲಿ ತಮ್ಮ ಹುಟ್ಟುಹಬ್ಬಕ್ಕೊಂದು ಕರೆಯೋಲೆಯನ್ನು ಬರೆಯುವಂತೆ ಹೇಳುವರು. (ವಿದ್ಯಾರ್ಥಿಗಳು ಅದನ್ನು ಬರೆಯುವಾಗ ತಮ್ಮ ಹೆಸರನ್ನು ಬರೆಯಬಾರದು ಮತ್ತು ಎಲ್ಲಿಯೂ ತಮ್ಮ ಹೆಸರನ್ನು ಪ್ರಸ್ತಾಪಿಸಬಾರದು) ನಂತರ ವಿದ್ಯಾಥಿಗಳು ತಾವು ಬರೆದ ಹಾಳೆಯನ್ನು ನೋಟ್ ಪುಸ್ತಕದಿಂದ ಹರಿದು ಶಿಕ್ಷಕರಿಗೆ ನೀಡುವರು. ಹೀಗೆ ಕಲೆಹಾಕಿದ ಹಾಳೆಗಳನ್ನು ಶಿಕ್ಷಕರು ಅದಲು–ಬದಲು ಮಾಡಿ ಎಲ್ಲ ವಿದ್ಯಾರ್ಥಿಗಳಿಗೆ ನೀಡುವರು. ಈಗ ಪ್ರತಿ ವಿದ್ಯಾರ್ಥಿಯೂ ತನಗೆ ಬಂದ ಕೈಬರೆಹವನ್ನು ಓದಿ ಅರ್ಥಮಾಡಿಕೊಂಡು, ಅದು ಯಾರ ಕೈಬರೆಹ ಎಂಬುದನ್ನು ಗುರುತಿಸಿ ಅದರ ಕೆಳಗೆ ಅವರ ಹೆಸರನ್ನು ಬರೆಯಬೇಕು. ನಂತರ ಶಿಕ್ಷಕರು ಮತ್ತೊಮ್ಮೆ ಆ ಎಲ್ಲ ಹಾಳೆಗಳನ್ನು ಸಂಗ್ರಹಿಸಿಕೊಂಡು ವಿದ್ಯಾರ್ಥಿಗಳು ಬರೆದ ಉತ್ತರ ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸುತ್ತಾ, ಯಾರು–ಯಾರು ಕೈಬರಹಗಳನ್ನು ಸರಿಯಾಗಿ ಗುರುತಿಸಿದ್ದಾರೋ ಅವರನ್ನು ಪ್ರಶಂಸಿಸುವರು. ನಂತರ ಪ್ರತೀ ವಿದ್ಯಾರ್ಥಿಯು ತಾನು ಬರೆದ ಕರೆಯೋಲೆಯನ್ನು ಕಲಿಕಾ ಹಾಳೆಯ ಖಾಲಿ ಜಾಗದಲ್ಲಿ ಅಂಟಿಸಿಕೊಳ್ಳುವಂತೆ ಸೂಚಿಸುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 7.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಪ್ರಶ್ನೆಯನ್ನು ಬಳಸಿಕೊಂಡು ಮೌಲ್ಯಮಾಪನ ಮಾಡುವುದು.

**ನಿಯೋಜಿತ ಕಾರ್ಯಗಳು :** ನಿಮ್ಮ ಶಾಲೆಯ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಸಲುವಾಗಿ ಅಗತ್ಯವೆನಿಸುವ ಸೂಚನೆ ಮತ್ತು ನಿರ್ದೇಶನಗಳನ್ನು ಬರೆದು ಅವನ್ನು ಶಿಕ್ಷಕರು ಸಹಾಯದಿಂದ ಸೂಕ್ತ ಜಾಗದಲ್ಲಿ ಅಂಟಿಸಿ. 2. ನಿಮ್ಮ ಊರಿನಲ್ಲಿರುವ ಅಥವಾ ಹತ್ತಿರದಲ್ಲಿರುವ ಗ್ರಂಥಾಲಯಕ್ಕೆ ಭೇಟಿ ಕೊಟ್ಟು ಅಲ್ಲಿ ಕಂಡು ಬರುವ ಸೂಚನೆಗಳು ಹಾಗೂ ನಿರ್ದೇಶನಗಳನ್ನು ಪಟ್ಟಿಮಾಡಿ. 3. ದಿನಪತ್ರಿಕೆ, ನಿಯತಕಾಲಿಕೆ ಇತ್ಯಾದಿ ಮೂಲಗಳಿಂದ ಪ್ರಸಿದ್ಧ ಲೇಖಕರು ಮತ್ತು ಕವಿಗಳ ಕೈ ಬರೆಹವನ್ನು ಸಂಗ್ರಹಿಸಿ ಓದಿರಿ.

ವಿಷಯ ಶಿಕ್ಷಕರ ಸಹಿ                                                                                                                                    ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–10

**10. ಟಿಪ್ಪಣಿ, ವರದಿ, ಪತ್ರಲೇಖನ, ಪ್ರಬಂಧ, ಆಹ್ವಾನಪತ್ರಿಕೆ, ಜಾಹಿರಾತು, ಪ್ರಕಟಣೆ ಇತ್ಯಾದಿ ದೈನಂದಿನ ವ್ಯವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ ಬೆಳೆಸಿಕೊಳ್ಳುತ್ತಾರೆ.**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ವಿದ್ಯಾರ್ಥಿಗಳು ತಾವು ಪಡೆದಿರುವ ಜ್ಞಾನವನ್ನು ಲಿಖಿತವಾಗಿ ಟಿಪ್ಪಣಿ, ವರದಿ, ಪತ್ರಲೇಖನ, ಪ್ರಬಂಧ, ಆಹ್ವಾನ ಪತ್ರಿಕೆ, ಜಾಹೀರಾತು, ಪ್ರಕಟಣೆ ಇತ್ಯಾದಿ ದೈನಂದಿನ ವ್ಯವಹಾರಿಕ ಸಂದರ್ಭಗಳಲ್ಲಿ ಅಭಿವ್ಯಕ್ತಿಗೊಳಿಸುವ ಕೌಶಲಗಳನ್ನು ಬೆಳೆಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಮಾದರಿ ಪತ್ರಗಳು, ಆಹ್ವಶನ ಪತ್ರಿಕೆಗಳು, 8ನೇ ತರಗತಿ ಪಠ್ಯ ಪುಸ್ತಕ, ಪತ್ರಗಳು. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | ಚಟುವಟಿಕೆ: 1.ಪತ್ರ ಮಿತ್ರ | ಪತ್ರಗಳ ಪರಿಕಲ್ಪನೆ, ಅದರ ವಿಧ ಮತ್ತು ಸ್ವರೂಪವನ್ನು ತಿಳಿಯುವುದು. | ವಿದ್ಯಾರ್ಥಿಗಳೊಂದಿಗೆ ಸಾಮಾನ್ಯ ಸಂವಾದ ನಡೆಸುತ್ತಾ, ಪತ್ರಗಳ ಪರಿಕಲ್ಪನೆ, ಅವುಗಳ ಬಳಕೆ, ಮಹತ್ತ್ವ ಪತ್ರದ ವಿಧ ಇತ್ಯಾದಿಗಳ ಅಂಶಗಳ ಬಗ್ಗೆ ವಿದ್ಯಾರ್ಥಿಗಳಿಗಿರುವ ಪೂರ್ವಜ್ಞಾನವನ್ನು ಕ್ರೋಢೀಕರಿಸಿಕೊಳ್ಳುವುದು. ಎಲ್ಲ ಪತ್ರದ ಪ್ರಕಾರಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಅದನ್ನು ತಮ್ಮ ಕಲಿಕಾ ಹಾಳೆಯಲ್ಲಿ ಸೇರಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. 'ವ್ಯವಹಾರಿಕ' ಮತ್ತು 'ಖಾಸಗಿ ಪತ್ರ'ಗಳ ಪರಿಕಲ್ಪನೆ ಆಧಾರದ ಮೇಲೆ ಈಗಾಗಲೇ ಪಟ್ಟಿ ಮಾಡಿದ ಪತ್ರಗಳನ್ನು ವ್ಯಾವಹಾರಿಕ ಮತ್ತು ಖಾಸಗಿ ಪತ್ರಗಳಾಗಿ ವರ್ಗೀಕರಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ– 1.1,1.2 | ಅವಲೋಕನ | |
| | ಚಟುವಟಿಕೆ: 2.ಪತ್ರ ಚಿತ್ರ | ಔಪಚಾರಿಕ ಮತ್ತು ಅನೌಪಚಾರಿಕ ಪತ್ರದ ಸ್ವರೂಪವನ್ನು ಪ್ರಾಯೋಗಿಕವಾಗಿ ಚರ್ಚಿಸಿ ಅರ್ಥ ಮಾಡಿಕೊಳ್ಳುವುದು. | ಒಂದು ಮಾದರಿ ಔಪಚಾರಿಕ ಪತ್ರವನ್ನು ಮಿಂಚುಪಟ್ಟಿಯ ಮೂಲಕ ಕತ್ತರಿಸಿ ಸಿದ್ಧಪಡಿಸಿಕೊಂಡು ಬಂದಿರುವುದು. ಅದನ್ನು ಮೊದಲಿಗೆ ಗುಂಪುಗಳಲ್ಲಿ ಜೋಡಿಸಲು ಅವಕಾಶ ಮಾಡಿಕೊಡುವುದು. ನಂತರ ವಿದ್ಯಾರ್ಥಿಗಳು ಕ್ರಮಾನುಗತವಾಗಿ ಜೋಡಿಸುವುದನ್ನು ಗಮನಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದು. ಮುಂದುವರಿದು ಕಪ್ಪು ಹಲಗೆಯ ಮೇಲೆ ಒಂದು ಮಾದರಿ ರಜಾ ಅರ್ಜಿಯನ್ನು ಬರೆದು ಅಲ್ಲಿ ಬಳಸಿರುವ ಹಂತಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು. ಅಗತ್ಯ ಸಂವಾದವನ್ನು ನಡೆಸುತ್ತಾ ಖಾಸಗೀ/ಅನೌಪಚಾರಿಕ ಪತ್ರದ ಸ್ವರೂಪವನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 ಮತ್ತು 2.2,2.3,2.4 | ಅವಲೋಕನ | |
| | ಚಟುವಟಿಕೆ: 3.ಆಹ್ವಾನ ಪತ್ರಿಕೆ | ಆಹ್ವಾನ ಪತ್ರಿಕೆಯ ಪರಿಕಲ್ಪನೆ, ಸ್ವರೂಪ ಮತ್ತು ಅದರ ರಚನೆಯನ್ನು ಅರ್ಥಮಾಡಿಕೊಳ್ಳುವುದು. | ವಿದ್ಯಾರ್ಥಿಗಳ ಜೊತೆಗೂಡಿ ಸ್ಥಳೀಯವಾಗಿ ಸಿಗುವ ವಿವಿಧ ಆಹ್ವಾನ ಪತ್ರಿಕೆಗಳನ್ನು ಮೊದಲಿಗೆ ಸಂಗ್ರಹಿಸುವುದು. ಆ ನಂತರ ವಿದ್ಯಾರ್ಥಿ ಸಂಖ್ಯೆಗೆ ಅನುಗುಣವಾಗಿ ತರಗತಿಯನ್ನು 4 ತಂಡಗಳಾಗಿ ಮಾಡುವುದು. ನಂತರ ಆಹ್ವಾನ ಪತ್ರಿಕೆಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳ ಜೊತೆ ಅವುಗಳ ಸ್ವರೂಪದ ಬಗ್ಗೆ ಚರ್ಚಿಸುವುದು. ಈ ಚರ್ಚೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ಆಹ್ವಾನ ಪತ್ರಿಕೆಯ ಬಗ್ಗೆ ಟಿಪ್ಪಣಿ ಬರೆದುಕೊಳ್ಳುವರು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ– 3.1,3.2,3.2 | ಅವಲೋಕನ | |
| | ಚಟುವಟಿಕೆ: 4.ಜಾಹೀರಾತು | ಜಾಹೀರಾತುಗಳ ಪರಿಚಯ ಮತ್ತು ಅದರಲ್ಲಿರುವ ಮುಖ್ಯಾಂಶಗಳನ್ನು ತಿಳಿಯುವುದು | ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ ದೂರದರ್ಶನ ಮತ್ತು ಸುದ್ದಿ ಮಾಧ್ಯಮಗಳಲ್ಲಿ ವೀಕ್ಷಿಸಿರುವ ಜಾಹೀರಾತುಗಳ ಬಗ್ಗೆ, · ಜಾಹೀರಾತಿನಲ್ಲಿ ಕಂಡು ಬರುವ ವಿಷಯ ಏನು? · ಜಾಹೀರಾತುಗಳ ಉದ್ದೇಶ ಏನು? · ಮತ್ತು ಜಾಹೀರಾತಿನ ಅವಶ್ಯಕತೆ ಏನು? ಇತ್ಯಾದಿ ವಿಷಯಗಳ ಬಗ್ಗೆ ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡುವುದು. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |

| | | | | | | |
|---|---|---|---|---|---|---|
| | ಚಟುವಟಿಕೆ: 5.ಪ್ರಕಟಣೆ ಓದು | ಪ್ರಕಟಣೆಯ ಪರಿಕಲ್ಪನೆ ಮತ್ತು ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು. ಮತ್ತು ಸ್ವತಃ ಪ್ರಕಟಣೆಗಳನ್ನು ರಚಿಸುವುದು. | ವಿವಿಧ ಇಲಾಖೆಗಳಿಂದ ಪ್ರಕಟಗೊಳ್ಳುವ ಕೆಲವು ಪ್ರಕಟಣೆಗಳನ್ನು ಸಂಗ್ರಹಿಸಿಕೊಂಡು ತರಗತಿಗೆ ತಂದು ವಿದ್ಯಾರ್ಥಿಗಳನ್ನು 4 ಗುಂಪು ಮಾಡಿ ಅವನ್ನು ನೀಡಿ, ಅದನ್ನು ಓದಿ ಅರ್ಥ ಮಾಡಿಕೊಂಡು ಅವುಗಳ ಸ್ವರೂಪದ ಬಗ್ಗೆ ಚರ್ಚೆ ಮಾಡುವಂತೆ ಸೂಚಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಪತ್ರ ಬರೆಹಗಳ ಬಗ್ಗೆ ಪ್ರಶ್ನೆ ನೀಡಿ ನಿಯೋಜಿತ ಕಾರ್ಯವನ್ನು ನೀಡಿ ಮೌಲ್ಯಮಾಪನ ಮಾಡುವುದು.

**ನಿಯೋಜಿತ ಕಾರ್ಯಗಳು :** 1. ಪತ್ರಿಕೆಗಳಲ್ಲಿ ಬರುವ ಜಾಹೀರಾತು ಮತ್ತು ಪ್ರಕಟಣೆಗಳನ್ನು ಸಂಗ್ರಹಿಸಿರಿ.

2. ಅಂಚೆ ಕಛೇರಿಗೆ ಭೇಟಿ ನೀಡಿ ಅಲ್ಲಿ ನಡೆಯುವ ಕೆಲಸ ಕಾರ್ಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.

3. ದೂರದ ಊರಿನಲ್ಲಿರುವ ನಿನ್ನ ಗೆಳೆಯ ಅಥವಾ ಗೆಳತಿ ಒಂದು ಪತ್ರಬರೆಯಿರಿ

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–11

**11. ದೈನಂದಿನ ಜೀವನಕ್ಕೆ ಹೊರತಾದ ಘಟನೆ/ಪರಿಸ್ಥಿತಿಯ ಮೇಲೆ ವಿಭಿನ್ನ ಕ್ರಮದಲ್ಲಿ ಸೃಜನಾತ್ಮಕತೆಯಲ್ಲಿ ಬರೆಯುತ್ತಾರೆ. ಉದಾಹರಣೆಗೆ: ಸಾಮಾಜಿಕ ಮಾಧ್ಯಮಗಳಲ್ಲಿ ನೋಟ್, ಬುಕ್ಕಿನಲ್ಲಿ ಅಥವಾ ಸಂಪಾದಕರಿಗೆ ಬರೆಯುವ ಪತ್ರ ರೂಪದಲ್ಲಿ ಮುಂತಾದ ವಿವಿಧ ಕಲೆ ಮತ್ತು ಅವುಗಳಲ್ಲಿ ಬಳಕೆಯಾಗುವ ಭಾಷೆಗಳ ಸೃಜನಶೀಲ ಬಳಕೆಯನ್ನು ಮಾಡುತ್ತಾರೆ. ಕಲಾತ್ಮಕವಾಗಿ ಅಕ್ಷರಗಳನ್ನು ಜೋಡಿಸುವುದು, ಆಕರ್ಷಕವಾಗಿ ತಮ್ಮ ಓದುಗರನ್ನು ಮತ್ತು ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಮಾತನ್ನು ಪ್ರಭಾವಶಾಲಿಯಾಗಿ ಬರೆಯುತ್ತಾರೆ.**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | **ದೈನಂದಿನ ಜೀವನಕ್ಕೆ ಹೊರತಾದ ಘಟನೆಗಳು ಹಾಗೂ ಪರಿಸ್ಥಿತಿಗಳ ಬಗ್ಗೆ ಸೃಜನಾತ್ಮಕವಾಗಿ ಪ್ರತಿಕ್ರಿಯಿಸಲು ಪದಸಂಪತ್ತು, ಭಾಷಾಬಳಕೆ, ಪದಗಳ ಕಲಾತ್ಮಕ ಜೋಡಣೆ ಇನ್ನಿತರ ಸಾಮರ್ಥ್ಯಗಳನ್ನು ಈ ಕಲಿಕಾ ಫಲದ ಮೂಲಕ ಗಳಿಸಿಕೊಳ್ಳುವ ನಿರೀಕ್ಷೆಯನ್ನು ಹೊಂದಲಾಗಿದೆ.** | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, 8ನೇ ತರಗತಿ ಪಠ್ಯ ಪುಸ್ತಕ, ಮಾದರಿ ಪತ್ರಗಳು. | | | | | |

| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
|---|---|---|---|---|---|---|
| | | | | **ಸಾಧನಗಳು** | **ತಂತ್ರಗಳು** | |
| | ಚಟುವಟಿಕೆ: 1.ಸುತ್ತ–ಮುತ್ತ | ದೈನಂದಿನ ಜೀವನಕ್ಕೆ ಹೊರತಾದ ಘಟನೆಗಳನ್ನು ಗುರುತಿಸಿ ಅವುಗಳ ಕುರಿತು ಚಿಂತಿಸಿ, ತಮ್ಮ ಅನಿಸಿಕೆ ವ್ಯಕ್ತಪಡಿಸುವುದು. | ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿ ನೀಡಲಾದ ಚಿತ್ರಗಳನ್ನು ಅವಲೋಕಿಸಿ, ಅಲ್ಲಿರುವ ವಸ್ತು–ವಿಷಯ– ಸನ್ನಿವೇಶವನ್ನು ತಮ್ಮ ದೈನಂದಿನ ಬದುಕಿನ ಹಿನ್ನೆಲೆಯಲ್ಲಿ ಗ್ರಹಿಸಿ, ಚಿಂತಿಸಲು ಪ್ರೇರೇಪಿಸುವುದು ಮತ್ತು ಸಂವಾದ ನಡೆಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | ಚಟುವಟಿಕೆ: 2.ವಾಕ್ಯ ಬಂಧ–ಪ್ರಬಂಧ | ತಮ್ಮ ದೈನಂದಿನ ಬದುಕಿನಲ್ಲಿ ವ್ಯತಿರಿಕ್ತವಾದ ಸಾಮಾಜಿಕ ವಿಷಯಗಳನ್ನು ಕುರಿತು ಚಿಂತಿಸಿ, ಪ್ರಬಂಧ ಬರೆಯುವುದು. | ಇದು 1ನೇ ಚಟುವಟಿಕೆಯ ಮುಂದುವರೆದ ಭಾಗವಾಗಿದ್ದು, ಈ ಹಿಂದೆ ವಿದ್ಯಾರ್ಥಿಗಳು ನೀಡಲ್ಪಟ್ಟ ಚಿತ್ರಗಳ ಬಗ್ಗೆ ಅನಿಸಿಕೆ ಬರೆದಿದ್ದನ್ನು ನೆನಪಿಸುತ್ತಾ, ಸಂವಾದವನ್ನು ನಡೆಸುತ್ತಾ, ಇದೀಗ ತಮ್ಮ ಅನಿಸಿಕೆಗಳನ್ನು ಆಧರಿಸಿ, ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ಪ್ರಬಂಧವನ್ನು ಬರೆಯುವಂತೆ ಸೂಚಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | ಚಟುವಟಿಕೆ: 3.ಸಂಪಾದಕರಿಗೆ ಪತ್ರ | ಸಾಮಾಜಿಕ ಹಿತಾಸಕ್ತಿಯ ವಿಷಯಗಳನ್ನು ಪ್ರಸ್ತಾಪಿಸಿ ಪರಿಣಾಮಕಾರಿಯಾಗಿ ಅಥವಾ ಕ್ರಿಯಾತ್ಮಕವಾಗಿ ಸಂಪಾದಕರಿಗೆ ಪತ್ರ ಬರೆಯುವುದು. | ಹಿಂದಿನ ಚಟುವಟಿಕೆಯ ಮುಂದುವರೆದ ಭಾಗವಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಈ ಹಿಂದೆ ಚರ್ಚಿಸಿದ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು, ಆ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆದು ವರದಿಯನ್ನು ಪ್ರಕಟಿಸುವಂತೆ ವೃತ್ತ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯುವಂತೆ ತಿಳಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–3.1 | | |
| | ಚಟುವಟಿಕೆ: 4.ಅಧಿಕಾರಿಗಳಿಗೆ ಪತ್ರ | ದೈನಂದಿನ ಬದುಕಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಸಲುವಾಗಿ ಇಲಾಖೆಗಳಿಗೆ ಪತ್ರ ಬರೆಯುವ ಕೌಶಲ ಬೆಳೆಸುವುದು. | ಯಾವುದಾದರು ಒಂದು ವಿಷಯದ ಬಗ್ಗೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ ಪತ್ರ ಬರೆವಣಿಗೆಯನ್ನು ಮಾಡಿಸುವುದು. ಇದಕ್ಕೂ ಮುನ್ನ ಶಿಕ್ಷಕರು ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳ ಹುದ್ದೆಯ ಪದನಾಮವನ್ನು ನಮೂದಿಸುವುದು, ಸಂಬೋಧನೆ, ಪತ್ರದ ಒಡಲು ಇತ್ಯಾದಿ ಅಂಶಗಳನ್ನು ಕುರಿತು ಚರ್ಚಿಸುವರು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–4.1 | | |

| | | | | | | |
|---|---|---|---|---|---|---|
| | 5.ಯುದ್ದ ಬೇಡ ಶಾಂತಿ ಬೇಕು | ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಸೃಜನಾತ್ಮಕವಾಗಿ ಬರೆದು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸುವುದು. | ಕಲಿಕಾ ಹಾಳೆಯಲ್ಲಿರುವ ಯುದ್ಧದ ಸನ್ನಿವೇಶದ ಚಿತ್ರವನ್ನು ತೋರಿಸಿ ಅದನ್ನು ಸೂಕ್ಷ್ಮವಾಗಿ ಗಮನಿಸಲು ಹೇಳುವುದು. ನಂತರ ಅದರ ಬಗ್ಗೆ ಸಂವಾದ ನಡೆಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–5.1 | | |
| | 6.ಯುದ್ಧ (ಕೊಂದು) ಪದ | ಸಮಕಾಲೀನ ವಿದ್ಯಮಾನಗಳನ್ನು ಕುರಿತು, ಉದ್ದೇಶಿತ ಓದುಗರನ್ನು ಗಮನದಲ್ಲಿಟ್ಟುಕೊಂಡು ತಮ್ಮ ಪ್ರತಿಕ್ರಿಯೆಗಳನ್ನು ಸೃಜನಾತ್ಮಕವಾಗಿ ಬರೆದು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು. | ಹಿಂದಿನ ಚಟುವಟಿಕೆಯ ಮುಂದುವರೆದ ಭಾಗವಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿ ಯುದ್ಧಕ್ಕೆ ಸಂಬಂಧಿಸಿದ ಮತ್ತೊಂದು ಚಿತ್ರವನ್ನು ಸೂಕ್ಷ್ಮವಾಗಿ ಅವಲೋಕಿಸಲು ಹೇಳುವುದು. ನಂತರ ಅದರ ಬಗ್ಗೆ ಸಾಮಾನ್ಯ ಸಂಭಾಷಣೆ ನಡೆಸುತ್ತಾ ಅದರ ಯುದ್ಧ ದಾಹಿ ಮನಃಸ್ಥಿತಿಗಳ ವಿರುದ್ಧ, ಶಾಂತಿ ಸಂದೇಶವನ್ನು ನೀಡುತ್ತಾ ಪದ್ಯವೊಂದನ್ನು ರಚಿಸಲು ಪ್ರೇರೇಪಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–6.1 | | |

**ಮೌಲ್ಯಮಾಪನ ಚಟುವಟಿಕೆ :** ಪರಿಸರ ಮಾಲಿನ್ಯ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ವಾಯುಮಾಲಿನ್ಯದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಪ್ರಬಂಧ ಬರೆಯಿರಿ. ಅಥವಾ ವಾಯುಮಾಲಿನ್ಯದಿಂದಾಗುವ ದುಷ್ಪರಿಣಾಮಗಳ ಕುರಿತು ಪದ್ಯವನ್ನು ರಚಿಸಿ. ಅಥವಾ ವಾಯುಮಾಲಿನ್ಯದಿಂದಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರ ಹಿತಾಸಕ್ತಿಯ ದೃಷ್ಟಿಯಿಂದ ನಿಮಗಿಷ್ಟವಾದ ಪತ್ರಿಕೆಗೆ ಒಂದು ಪತ್ರ ಬರೆಯಿರಿ.

**ನಿಯೋಜಿತ ಕಾರ್ಯಗಳು :** 1. ನಿಮ್ಮ ಊರಿನಲ್ಲಿರುವ ಸ್ಥಳಿಯ ಸಮಸ್ಯೆಗಳಲ್ಲಿ ಒಂದು ಸಮಸ್ಯೆಯ ಬಗ್ಗೆ ವರದಿಯನ್ನು ಸಿದ್ಧಪಡಿಸಿಕೊಂಡು, ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಿರಿ.

ವಿಷಯ ಶಿಕ್ಷಕರ ಸಹಿ                                                                                                    ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–12

**12. ಕವಿತೆ, ಕಥೆ, ನಾಟಕ, ಪ್ರಬಂಧ, ಪ್ರಹಸನ, ವಿಚಾರಗೋಷ್ಠಿ, ಅಲ್ಲದೆ ಹಳಗನ್ನಡ, ನಡುಗನ್ನಡ ಕೀರ್ತನೆ, ಜನಪದ, ವಚನಸಾಹಿತ್ಯ, ಆತ್ಮಕಥೆ, ಜೀವನಕಥೆ, ಪ್ರವಾಸಗಳನ್ನು ಆಲಿಸಿ ಅರ್ಥಮಾಡಿಕೊಳ್ಳುತ್ತಾರೆ, ವಿಷಯಾನುಸಾರ ಸಹಜ ಚರ್ಚೆ, ಸಂವಾದದಲ್ಲಿ ಪಾಲ್ಗೊಂಡು ಅಭಿಪ್ರಾಯ ತಿಳಿಸುತ್ತಾರೆ ಮತ್ತು ಪದಗಳು, ಅಕ್ಷರಗಳ ಧ್ವನಿಸಾಮ್ಯತೆ, ವ್ಯತ್ಯಾಸ ಗಮನಿಸಿ ಓದುತ್ತಾರೆ, ಸರಳವಾಕ್ಯಗಳಲ್ಲಿ ಟಿಪ್ಪಣಿ ಮಾಡಿಕೊಳ್ಳುತ್ತಾರೆ.**

| 8ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | **ಕನ್ನಡ ಭಾಷೆಯಲ್ಲಿರುವ ವಿವಿಧ ಸಾಹಿತ್ಯ ಪ್ರಕಾರಗಳು, ಭಾಷಾ ವೈವಿಧ್ಯತೆ, ಪದಗಳು, ಅಕ್ಷರಗಳ ಧ್ವನಿ ಸಾಮ್ಯತೆ, ಧ್ವನಿ ವ್ಯತ್ಯಾಸಗಳನ್ನು ಅರ್ಥೈಸಿಕೊಂಡು, ತಮ್ಮದಾದ ರೀತಿಯಲ್ಲಿ ಕಲ್ಪಿಸಿಕೊಂಡು ಸೃಜನಾತ್ಮಕವಾಗಿ ಬರೆಯುವ ಮತ್ತು ಮೌಖಿಕವಾಗಿ ಅಭಿವ್ಯಕ್ತಪಡಿಸುವ ಸಾಮರ್ಥ್ಯವನ್ನು ನಿರೀಕ್ಷಿಸಲಾಗಿದೆ.** | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಪದಗಳ ಅರ್ಥಗಳ ಮಿಂಚುಪಟ್ಟಿ, 8ನೇ ತರಗತಿ ಪಠ್ಯ ಪುಸ್ತಕ. | | | | | |

| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
|---|---|---|---|---|---|---|
| | | | | **ಸಾಧನಗಳು** | **ತಂತ್ರಗಳು** | |
| | ಚಟುವಟಿಕೆ: 1.ಸಾಹಿತ್ಯ ಮಂಜರಿ | ಆತ್ಮಕಥೆ, ಜೀವನ ಚರಿತ್ರೆ ಮತ್ತು ಪ್ರವಾಸ ಕಥನಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು. | ವಿದ್ಯಾರ್ಥಿಗಳಿಗೆ ಅವರ ಜೀವನದ ಒಂದು ಘಟನೆಯನ್ನು ಹೇಳುವಂತೆ ತಿಳಿಸುವುದು. ಮುಂದುವರೆದು ತಮ್ಮ ಮಿತ್ರರ ಜೀವನದ ಒಂದು ಘಟನೆಯನ್ನು ಕುರಿತು ಹೇಳುವಂತೆ ತಿಳಿಸುವುದು. ತದನಂತರ ಸ್ವತಃ ನಾನೇ ವೀಕ್ಷಿಸಿದ ಒಂದು ಸ್ಥಳದ ಬಗ್ಗೆ ತಮಗಾದ ಅನುಭವವನ್ನು ಹೇಳುವುದು. ನಂತರ ವಿದ್ಯಾರ್ಥಿಗಳು ಹೇಳಿದ ಘಟನೆಗಳು ಹಾಗೂ ತಾವು ಹೇಳಿದ ವಿಚಾರಗಳಲ್ಲಿ ಅಭಿವ್ಯಕ್ತಿ ಸ್ವರೂಪಕ್ಕಿರುವ ವ್ಯತ್ಯಾಸವನ್ನು ಕುರಿತು ಚರ್ಚಿಸುತ್ತಾ ಆತ್ಮಕತೆ, ಜೀವನಚರಿತ್ರೆ, ಹಾಗೂ ಪ್ರವಾಸ ಕಥನಗಳ ಸ್ವರೂಪವನ್ನು ಪರಿಚಯಿಸುವುದು. ಜೊತೆಗೆ ಪ್ರಹಸನಗಳು ಮತ್ತು ಅದರ ಸ್ವರೂಪವನ್ನು ತಿಳಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | ಚಟುವಟಿಕೆ: 2.ಕೂಡಿಸೋಣ ಪುಸ್ತಕ, ಉಪಯೋಗಿಸಿ ಮಸ್ತಕ | ವಿದ್ಯಾರ್ಥಿಗಳಿಗೆ ಆತ್ಮಕಥೆ, ಜೀವನ ಚರಿತ್ರೆ ಮತ್ತು ಪ್ರವಾಸ ಕಥನಗಳನ್ನು ಪರಿಚಯಿಸುವುದು. | ಕಲಿಕಾ ಹಾಳೆಯ ಅಭ್ಯಾಸ 2.1 ನ್ನು ಉಪಯೋಗಿಸಿ ಈ ಚಟುವಟಿಕೆಯನ್ನು ಮಾಡಿಸುವುದು. ಈ ಚಟುವಟಿಕೆಯಲ್ಲಿ ಶಿಕ್ಷಕರ ಕೈಪಿಡಿಯಲ್ಲಿ ನೀಡಿರುವ ಪುಸ್ತಕಗಳನ್ನು ನೋಡಿಕೊಂಡು ಅದರಂತೆಯೆ ಕಲಿಕಾ ಹಾಳೆಯಲ್ಲಿ ನೀಡಿರುವ ಪುಸ್ತಕಗಳ ಮುಖಪುಟಗಳನ್ನು ನೋಡಿ ಅದರ ಕುರಿತು ಯೋಚಿಸಲು ಹೇಳುವುದು, ಅನಂತರ ಆ ಪುಸ್ತಕಗಳೂ ಸೇರಿದಂತೆ, ಅದರೊಂದಿಗೆ ನೀಡಲಾದ ಇತರೆ ಪುಸ್ತಕಗಳ ಹೆಸರನ್ನು ಓದಿಕೊಂಡು, 1 ನೇ ಚಟುವಟಿಕೆಯಲ್ಲಿ ಪಡೆದ ಜ್ಞಾನದ ಆಧಾರದ ಮೇಲೆ ಆ ಪುಸ್ತಕಗಳನ್ನು 3 ಪ್ರಕಾರಗಳಾಗಿ ವಿಂಗಡಿಸುವರು. ನಂತರ ಅವುಗಳನ್ನು ಪರಿಶೀಲಿಸಿ ಸರಿಮಾಡಿಕೊಳ್ಳಲು ಅವಕಾಶವನ್ನು ನೀಡುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | ಚಟುವಟಿಕೆ: 3.ಗೆಳೆಯನ ಜೊತೆ ನನ್ನ ಕಥೆ | ಜೀವನ ಚರಿತ್ರೆಯ ಸ್ವರೂಪವನ್ನು ಪ್ರಾಯೋಗಿಕವಾಗಿ ಚರ್ಚಿಸುವುದು. | ಈ ಚಟುವಟಿಕೆಯನ್ನು ಮಾಡಿಸಲು ವಿದ್ಯಾರ್ಥಿಗಳನ್ನು ಒಂದು ತಂಡದಲ್ಲಿ ಇಬ್ಬರಂತೆ ಗುಂಪು ಮಾಡಿ, ಮಾಡುವಾಗ ಆ ಗುಂಪಿನಲ್ಲಿ ಇಬ್ಬರು ಒಬ್ಬರಿಗೊಬ್ಬರು ಗೊತ್ತಿರುವವರು ಇರುವಂತೆ ನೋಡಿಕೊಳ್ಳುವರು. ನಂತರ ಅವರಿಬ್ಬರು ತಂಡದಲ್ಲಿ ಕುಳಿತು ಪರಸ್ಪರ ತಮ್ಮ ಜೀವನದ ಘಟನೆಯನ್ನು ಹೇಳುವರು. ಒಬ್ಬರು ಘಟನೆಯನ್ನು ಹೇಳುವಾಗ ತಂಡದ ಇನ್ನೊಬ್ಬ ಸದಸ್ಯರು ತಮ್ಮ ಕಲಿಕಾ ಹಾಳೆಯ ಅಭ್ಯಾಸ 3.1 ರಲ್ಲಿ ಬರೆದುಕೊಳ್ಳಬೇಕು, ಎಂದು ತಿಳಿಸಿ ಗುಂಪಿಗೆ ಕಾಲಾವಕಾಶವನ್ನು ನೀಡುವುದು. ಆನಂತರ ತರಗತಿಯಲ್ಲಿ ಮಂಡಿಸುವಂತೆ ಸೂಚಿಸುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 | ಅವಲೋಕನ | |

| | | | | | | |
|---|---|---|---|---|---|---|
| | ಚಟುವಟಿಕೆ: 4.ನನ್ನ ಪ್ರವಾಸ ನನ್ನ ಅನುಭವ | ಪ್ರವಾಸ ಕಥನಗಳ ಸ್ವರೂಪವನ್ನು ಪರಿಚಯಿಸುವುದು. | ಚಟುವಟಿಕೆಯ ಭಾಗವಾಗಿ "ತಲಕಾಡಿನ ವೈಭವ" ಗದ್ಯಭಾಗವನ್ನು ವಿವರಿಸಿ ಓದಲು ಅವಕಾಶವನ್ನು ನೀಡಿ ಆನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಅವರು ನೋಡಿದ ಪ್ರವಾಸಿ ತಾಣದ ಕುರಿತು ಕಲಿಕಾ ಹಾಳೆ ಅಭ್ಯಾಸ 4.1 ರಲ್ಲಿ ಬರೆಯಲು ಸೂಚಿಸುವುದು. | ಕಲಿಕಾಹಾಳೆ ಅಭ್ಯಾಸ 4.1, 4.2 | ಅವಲೋಕನ | |
| | ಚಟುವಟಿಕೆ: 5 ಚರ್ಚೆ, ಸಂವಾದ, ವಿಚಾರಗೋಷ್ಠಿ ಹಾಗೂ ಟಿಪ್ಪಣಿ | ವಿದ್ಯಾರ್ಥಿಗಳು ಚರ್ಚೆ, ಸಂವಾದ, ವಿಚಾರಗೋಷ್ಠಿ ಹಾಗೂ ಟಿಪ್ಪಣಿಗಳನ್ನು ಅರ್ಥೈಸಿ, ಅನ್ವಯಿಸಿಕೊಳ್ಳುವುದು. | ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಕಲಿಕಾ ಹಾಳೆಯಲ್ಲಿ ಮಾಸ್ಕ್ ಧರಿಸುವುದರ ಕುರಿತಾಗಿ ಇರುವ ಮಾಹಿತಿಯನ್ನು ಓದಿಕೊಳ್ಳುವಂತೆ ತಿಳಿಸುವರು. ನಂತರ ತರಗತಿಯನ್ನು ವಿದ್ಯಾರ್ಥಿಗಳ ಇಚ್ಛೆಯ ಅನುಸಾರ ಎರಡು ಗುಂಪುಗಳನ್ನಾಗಿ ಮಾಡುವರು. ಹೀಗೆ ಗುಂಪುಗಳು ರಚನೆಯಾದ ನಂತರ 1 ನೇ ತಂಡ ಮಾಸ್ಕ್ ಧರಿಸುವರ ಪರವಾಗಿಯೂ, 2ನೇ ತಂಡ ಮಾಸ್ಕ್ ಧರಿಸದಿರುವುದರ ಪರವಾಗಿಯೂ ಚರ್ಚೆ ಮತ್ತು ಸಂವಾದಗಳನ್ನು ಮಾಡುವಂತೆ ತಿಳಿಸುವುದು. | ಕಲಿಕಾಹಾಳೆ ಅಭ್ಯಾಸ 5.1 | ಅವಲೋಕನ | |
| | ಚಟುವಟಿಕೆ: 6.ಭಾಷೆಯ ಸೊಗಡು | ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಅರ್ಥೈಸುವುದು ಮತ್ತು ಪಠ್ಯಗಳನ್ನು ಓದುವುದು | ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲಿ ರಚನೆಯಾಗಿರುವ ವಿವಿಧ ಕಾಲಘಟ್ಟದ ಸಾಹಿತ್ಯ ಪ್ರಕಾರಗಳನ್ನು ಕೆಳಗೆ ನೀಡಿದ ಮಾದರಿಯಲ್ಲಿ ಹಳಗನ್ನಡ ನಡುಗನ್ನಡ ಹಾಗೂ ಹೊಸಗನ್ನಡದ ತುಣುಕುಗಳನ್ನು ನೀಡಿ ಓದಲು ತಿಳಿಸುವುದು. ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಅರ್ಥೈಸುವುದು. | ಕಲಿಕಾಹಾಳೆ ಅಭ್ಯಾಸ 6.1 | ಅವಲೋಕನ | |
| | ಚಟುವಟಿಕೆ: 7.ಗುಂಪು ಗೂಡು | ಹಳಗನ್ನಡ ಮತ್ತು ಹೊಸಗನ್ನಡ ಪದಗಳನ್ನು ಅರ್ಥೈಸುವುದು. | ತರಗತಿಯ ವಿದ್ಯಾರ್ಥಿಗಳಿಗೆ ಕೆಲವು ಪದಗಳಿರುವ ಮಿಂಚುಪಟ್ಟಿಯನ್ನು ನೀಡುವುದು. ವಿದ್ಯಾರ್ಥಿಗಳು ಆ ಪದಗಳನ್ನು ಓದಿ, ಗಮನಿಸಿ ಅವುಗಳಲ್ಲಿ ಹಳಗನ್ನಡ ಮತ್ತು ಹೊಸಗನ್ನಡದ ಪದಗಳನ್ನು ಬೇರ್ಪಡಿಸಿ ಬರೆದು, ತರಗತಿಯಲ್ಲಿ ಓದಿ ಹೇಳಲು ತಿಳಿಸುವುದು. | ಕಲಿಕಾಹಾಳೆ ಅಭ್ಯಾಸ 7.1 | ಅವಲೋಕನ | |
| | ಚಟುವಟಿಕೆ: 8.ವಚನ ಓದಿ, ಕೀರ್ತನೆ ಕೇಳೋಣ | ವಚನ ಮತ್ತು ಕೀರ್ತನೆಗಳ ಸಾಹಿತ್ಯ ಪ್ರಕಾರಗಳನ್ನು ಅರ್ಥೈಸುವುದು. | ವಚನಗಳು ಹಾಗೂ ಕೀರ್ತನೆಗಳನ್ನು ಹಾಡಿ, ವಿದ್ಯಾರ್ಥಿಗಳಿಂದ ವಾಚನ ಮಾಡಿಸಿ ಓದಿನಲ್ಲಿ ತಾವು ಗಮನಿಸಿದ ಅಂಶಗಳು ಹಾಗೂ ಅವುಗಳ ಸ್ವರೂಪ ಲಕ್ಷಣಗಳ ಕುರಿತು ಚರ್ಚಿಸುವುದು. | ಕಲಿಕಾಹಾಳೆ ಅಭ್ಯಾಸ 8.1 | ಅವಲೋಕನ | |
| | ಚಟುವಟಿಕೆ: 9.ಜನರ ಸುತ್ತ ಜನಪದ | ಜನಪದ ಸಾಹಿತ್ಯವನ್ನು ಓದುವುದು ಮತ್ತು ಅದರ ಸ್ವರೂಪ ಅರಿಯುವುದು. | ಜನಪದ ಗೀತೆಯನ್ನು ಹಾಡುವುದು. ಕ್ಯು ಆರ್ ಕೋಡ್ ಅನ್ನು ಬಳಸಿ ಪದ್ಯವನ್ನು ವಿದ್ಯಾರ್ಥಿಗಳಿಗೆ ಕೇಳಿಸುವುದು. ನಂತರ ಆಲಿಸಿದ ಜನಪದ ಗೀತೆಯ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತ ಜನಪದ ಸಾಹಿತ್ಯದ ಸ್ವರೂಪವನ್ನು ಅರ್ಥೈಸುವುದು. | ಕಲಿಕಾಹಾಳೆ ಅಭ್ಯಾಸ 9.1 | ಅವಲೋಕನ | |
| | ಚಟುವಟಿಕೆ: 10.ಧ್ವನಿಗೊಂದು ಹಾಸ್ಯ | ಪದಗಳು, ಅಕ್ಷರಗಳ ಧ್ವನಿಸಾಮ್ಯತೆ, ವ್ಯತ್ಯಾಸವನ್ನು ಗಮನಿಸಿ ಓದುವುದು. | ಕಲಿಕಾ ಹಾಳೆಯಲ್ಲಿ ನೀಡಲಾದ ಹಾಸ್ಯ ಪ್ರಸಂಗವನ್ನು ಓದಲು ತಿಳಿಸುವುದು. ನಂತರ ಹಾಸ್ಯ ಪ್ರಸಂಗದಲ್ಲಿ ಉಂಟಾದ ಧ್ವನಿ ಬಳಕೆಯ ತಪ್ಪುಗ್ರಹಿಕೆಯನ್ನು ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ ಧ್ವನಿಯನ್ನು ಸ್ಪಷ್ಟವಾಗಿ ಉಚ್ಚರಿಸುವ ಕ್ರಮವನ್ನು ತಿಳಿಸುವುದು. | ಕಲಿಕಾಹಾಳೆ ಅಭ್ಯಾಸ 10.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ವಿವಿಧ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದಂತೆ ಚಟುವಟಿಕೆಯನ್ನು ನೀಡಿ ಮೌಲ್ಯಮಾಪನ ಮಾಡುವುದು.

**ನಿಯೋಜಿತ ಕಾರ್ಯಗಳು :** 1. ನಿಮ್ಮ ಶಾಲೆ ಅಥವಾ ಊರಿನ ಗ್ರಂಥಾಲಯಕ್ಕೆ ಭೇಟಿ ನೀಡಿ ಯಾವುದಾದರೂ ಒಂದು ಆತ್ಮಕಥೆ ಮತ್ತು ಜೀವನ ಚರಿತ್ರೆಯನ್ನು ಓದಿರಿ.

2. ನಿಮ್ಮೂರಿನ ಸುತ್ತಮುತ್ತ ಚಾಲ್ತಿಯಲ್ಲಿರುವ ಎರಡು ಜನಪದ ಹಾಡುಗಳನ್ನು ಸಂಗ್ರಹಿಸಿ. ಓದಿರಿ.

ವಿಷಯ ಶಿಕ್ಷಕರ ಸಹಿ                                                                 ಮುಖ್ಯ ಶಿಕ್ಷಕರ ಸಹಿ